ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



19 ವರ್ಷದೊಳಗಿನವರ ಐಸಿಸಿ ಏಕದಿನ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 15 ಸಿಕ್ಸರ್-15 ಬೌಂಡರಿ ಸಮೇತ ದಾಖಲೆಯ ಶತಕ ಸಿಡಿಸಿದ ಭಾರತದ ವೈಭವ್ ಸೂರ್ಯವಂಶಿ...

07 ಫೆಬ್ರವರಿ 2026 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 324 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಹಣಕಾಸಿನ ಹಂಚಿಕೆ ಹಾಗು ಹತೋಟಿಯ ಹಿತಮಿತ ಹಲ್ವಾ ಬಜೆಟ್ » 2



ಅಧಿಕಾರಿಗಳ ನಿರ್ಲಕ್ಷ್ಯ : ರಂಗೇನಹಳ್ಳಿ ಏತ ನೀರಾವರಿ ಅಪೂರ್ಣ » 3





6ನೇ ಬಾರಿ ಪ್ರಶಸ್ತಿ ಗೆದ್ದ ಭಾರತ ಯುವ ಪಡೆ » 4

## ಎಂಸಿಇ: ಮೂವರ ಅಮಾನತು ಆದೇಶಕ್ಕೆ ತಡೆ

• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಮೂವರು ಕಾರ್ಯಕಾರಿ ಸಮಿತಿ ಸದಸ್ಯರ ವಿರುದ್ಧ ಹೊರಡಿಸಲಾಗಿದ್ದ ಅಮಾನತು ಆದೇಶಕ್ಕೆ ಜಿಲ್ಲಾ 4ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಕಾರ್ಯಕಾರಿ ಮಂಡಳಿ ಸದಸ್ಯರಾದ ಶ್ರೀಧರ್, ಡಾ॥ಅರವಿಂದ್ ಹಾಗು ಜಿ.ಆರ್. ಶ್ರೀನಿವಾಸ್ ಅವರನ್ನು ಅಮಾನತುಗೊಳಿಸಲಾಗಿತ್ತು. 2026ರ ಸೆ.6ರಂದು ಹೊರಡಿಸಿದ್ದ ಅಮಾನತು ಆದೇಶವನ್ನು ನ್ಯಾಯಾಲಯ ಈಗ ಅಮಾನತ್ತಿನಲ್ಲಿಟ್ಟಿದೆ. ಅರ್ಜಿದಾರರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ತಮ್ಮ ಹಕ್ಕುಗಳನ್ನು ಚಲಾಯಿಸಲು, ಸಭೆಗಳಲ್ಲಿ ಭಾಗವಹಿಸಲು ಮತ್ತು ಪ್ರತಿನಿಧಿಸಲು ಅಡ್ಡಿಪಡಿಸದಂತೆ ಪ್ರತಿವಾದಿಗಳು ಮತ್ತು ಅವರ ಪರವಾಗಿರುವವರಿಗೆ ತಾತ್ಕಾಲಿಕ ತಡೆಯಾಜ್ಞೆ ವಿಧಿಸಲಾಗಿದೆ.

# ಬೆಳೆ ವಿಮೆ ಜಾರಿ :ಕರ್ನಾಟಕ ನಂ.1

## 6000 ಕೋ.ರೂ. ಪರಿಹಾರ ವಿತರಣೆ: ಮುಖ್ಯಮಂತ್ರಿ ಸಿದ್ದರಾಮಯ್ಯ

• ಪ್ರಜೋದಯ ವರದಿ

**ಬೆಂಗಳೂರು:** ಬೆಳೆ ವಿಮೆ ಯೋಜನೆ ಜಾರಿಯಲ್ಲಿ ಕರ್ನಾಟಕ ದೇಶದಲ್ಲೇ ನಂ.1 ರಾಜ್ಯವಾಗಿದೆ. ಈವರೆಗೆ 6000 ಕೋ.ರೂ. ವಿಮೆ ಪರಿಹಾರವನ್ನು ರೈತರಿಗೆ ವಿತರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಅಂತರಾಷ್ಟ್ರೀಯ ವಾಣಿಜ್ಯ ಮೇಳ-2026 ಉತ್ಪಾದಾನೋತ್ತರ ಕೃಷಿ-ರೈತರ ಸಬಲೀಕರಣ ಹಾಗು ರಾಜ್ಯ ಮಟ್ಟದ ಕೃಷಿ ಪಂಡಿತ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ರೈತರಿಗೆ ಉತ್ತಮವಾದ ಬಿತ್ತನೆ ಬೀಜ, ರಸಗೊಬ್ಬರ, ಔಷಧಿ, ಸರ್ಕಾರ ಒದಗಿಸುತ್ತಿದ್ದು, ಯಂತ್ರೋಪಕರಣಗಳ ಖರೀದಿಗೆ 1,500 ಕೋ.ರೂ. ಸಹಾಯಧನ ನೀಡಲಾಗುತ್ತಿದೆ. ಕಬ್ಬು, ರಾಗಿ ಸೇರಿ ಹಲವು ಬೆಳೆಗಷ್ಟೇ ರೈತರು ಸೀಮಿತವಾಗುತ್ತಿದ್ದಾರೆ. ಕಬ್ಬು ಬೆಳೆಗಾರರೊಂದಿಗೆ ಚರ್ಚಿಸಿ ಬೆಂಬಲ ಬೆಲೆ ನಿಗದಿ ಪಡಿಸಲಾಯಿತು.

**ಪ್ರಮುಖಾಂಶಗಳು..**

- ಯಂತ್ರೋಪಕರಣ ಖರೀದಿಗೆ 1,500 ಕೋ.ರೂ. ಸಹಾಯ ಧನ
- ಕೃಷಿ ಭಾಗ್ಯ ಯೋಜನೆಗೆ 200 ಕೋ.ರೂ.

ಅಂತೆಯೇ ತೊಗರಿ ಬೆಳೆಗೆ ಖರೀದಿ ಕೇಂದ್ರವನ್ನು ಒಂದು ತಿಂಗಳ ಮುಂಚೆಯೇ ತೆರೆದು ರೈತರಿಗೆ ಅನುಕೂಲ ಕಲ್ಪಿಸಲಾಯಿತು ಎಂದರು.

**ಮಹಿಳಾ ಕೃಷಿಕರ ಸಾಧನೆ ಸ್ಫೂರ್ತಿ**

ನಮ್ಮ ಸರ್ಕಾರ ಕೃಷಿ ಕ್ಷೇತ್ರಕ್ಕೆ ಎಂದಿಗೂ ಬೆಂಬಲವಾಗಿ ನಿಂತಿದೆ. ಕೃಷಿ ಹಾಗು ಉತ್ಪಾದನೋತ್ತರ ಚಟುವಟಿಕೆಗಳಲ್ಲಿ ರೈತರು ತೊಡಗಿಕೊಳ್ಳುವ ಮೂಲಕ ಕೃಷಿಯನ್ನು ಲಾಭದಾಯಕಗೊಳಿಸಬಹುದಾಗಿದೆ. ರೈತರು ಉದ್ಯಮಿಗಳಾಗಬೇಕು. ಉತ್ಪನ್ನಗಳನ್ನು ಬೆಳೆಯುವ ಜೊತೆಗೆ, ಸಂಗ್ರಹಣೆ, ಸಂಸ್ಕರಣೆ, ಪ್ಯಾಕೇಜಿಂಗ್, ಮಾರುಕಟ್ಟೆ, ಉಪ ಉತ್ಪನ್ನಗಳ ಅಭಿವೃದ್ಧಿಯಲ್ಲಿ ರೈತರು ನಿರತರಾಗಬೇಕಿದೆ. ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ತೊಡಗಿಕೊಳ್ಳುವುದು ಅಗತ್ಯ. ಇಂದಿನ ಪ್ರಶಸ್ತಿಗೆ ಭಾಜನರಾದ ಮಹಿಳಾ ಕೃಷಿಕರ ಸಾಧನೆ ಸ್ಫೂರ್ತಿದಾಯಕವಾಗಿದೆ ಎಂದರು.



ಮೆಕ್ಕೆಜೋಳ ಹೆಚ್ಚುವರಿ ಇಳುವರಿ ಬಂದು 54 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗಬಹುದಾಗಿದೆ. ಆದ್ದರಿಂದ ಕೇಂದ್ರ ಕ್ವಿಂಟಾಲ್‌ವೊಂದಕ್ಕೆ 2400 ರೂ. ನಿಗದಿ ಪಡಿಸಿದ್ದು, ಮೆಕ್ಕೆಜೋಳ ಬಳಸುವ ಕಾರ್ಖಾನೆಗಳು, ಎಥನಾಲ್ ತಯಾರಕರೊಂದಿಗೆ ಚರ್ಚೆ ನಡೆಸಿ, 40 ಲಕ್ಷ ಮೆ.ಟನ್ ಮೆಕ್ಕೆಜೋಳ ಖರೀದಿಗೆ ಅನುವು ಮಾಡಿಕೊಡಲಾಯಿತು. ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಯಲ್ಲಿ ತೊಡಗಿಕೊಳ್ಳಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಕೃಷಿ ಕ್ಷೇತ್ರದಲ್ಲಿ ತೊಡಗಿರುವವರ ಪ್ರಮಾಣ ಶೇ.80 ರಷ್ಟಿತ್ತಾದರೂ ಈಗ ಶೇ.62 ಕ್ಕೆ ಇಳಿದಿದೆ. ಉತ್ಪಾದನೋತ್ತರ ಕಾರ್ಯಗಳನ್ನು ಕೈಗೊಂಡಾಗ ಮಾತ್ರ ಕೃಷಿ ಲಾಭದಾಯಕವಾಗುತ್ತದೆ ಎಂದು ತಿಳಿಸಿದರು.

**ಕೃಷಿ ಭಾಗ್ಯ ಯೋಜನೆ ಮರುಸ್ಥಾಪನೆ**

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳಲ್ಲಿ ಬಹಳಷ್ಟು ಈಡೇರಿಸಲಾಗಿದೆ. ಅವುಗಳಲ್ಲಿ ಜಾರಿಯಾಗಿರುವ ಕೃಷಿ ಭಾಗ್ಯ ಯೋಜನೆ ಪ್ರಮುಖವಾಗಿದೆ. ಬಿಜೆಪಿ ಅಧಿಕಾರಾವಧಿಯಲ್ಲಿ ಈ ಯೋಜನೆಯನ್ನು ಸ್ಥಗಿತಗೊಳಿಸಿತ್ತು. ನಮ್ಮ ಸರ್ಕಾರ ಮತ್ತೊಮ್ಮೆ ಕೃಷಿ ಭಾಗ್ಯ ಯೋಜನೆಯನ್ನು ಮರುಸ್ಥಾಪಿಸಿದೆ. ಸುಮಾರು 200 ಕೋ.ರೂ. ಅನುದಾನವನ್ನು ಅದಕ್ಕಾಗಿ ನೀಡಲಾಗಿದೆ. ಅನ್ನಭಾಗ್ಯ ಯೋಜನೆಗಳಿಂದ ಬಡವರು ಉಳಿತಾಯದಲ್ಲಿ ಹೂಡಿಕೆ ಮಾಡಬಹುದಾಗಿದೆ. ಎಲ್ಲರಿಗೂ ಸಮಾನ ಅವಕಾಶವನ್ನು ನೀಡುವ ಉದ್ದೇಶದಿಂದ ಈ ಜನಪರ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದರು.

## ತಾಕತ್ತಿದ್ದರೆ ತಹಶೀಲ್ದಾರ್ ವಿರುದ್ಧ ದೂರು ನೀಡಲಿ: ಎ.ಮಂಜು

• ಪ್ರಜೋದಯ ವರದಿ



**ಹೊಳೆನರಸೀಪುರ:** ಮಹಿಳಾ ತಹಶೀಲ್ದಾರ್ ಅಕ್ರಮವಾಗಿ ಹಣ ಮಾಡುತ್ತಿದ್ದಾರೆಂದು ಸದನದಲ್ಲಿ ಆರೋಪಿಸಿರುವ ಶಾಸಕ ಕೆ.ಎಂ.ಶಿವಲಿಂಗೇಗೌಡ ತಾಕತ್ತಿದ್ದರೆ ದೂರು ನೀಡಿ ತನಿಖೆಗೆ ಆಗ್ರಹಿಸಲಿ ಎಂದು ಅರಕಲಗೂಡು ಶಾಸಕ ಎ.ಮಂಜು ಸವಾಲು ಹಾಕಿದರು.

ತಾಲ್ಲೂಕಿನ ದೊಡ್ಡಕಾಡನೂರು ಹೇಮಾವತಿ ನೀರಾವರಿ ಇಲಾಖೆ ಕಚೇರಿಯಲ್ಲಿ ಶುಕ್ರವಾರ ರಂಗೇನಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿ ಪರಿಶೀಲನಾ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇನ್ನೊಬ್ಬರ ಬಗ್ಗೆ ವೈಯಕ್ತಿಕವಾಗಿ ಮಾತನಾಡುವ ಮುನ್ನ ನಾ ಯಾರು, ನನ್ನ ಅಪ್ಪ ಯಾರು, ನನ್ನ ರಾಜಕೀಯ ಹಿನ್ನಲೆ ಏನು, ನನಗೆ ಯಾರ ಕೃಪ ಕಟಾಕ್ಷ ಇತ್ತು, ನಾ ಏನು ಮಾಡುತ್ತಿದ್ದೆ ಎಂಬುದನ್ನು ಅರಿತಿರಬೇಕು. ಸಾರ್ವಜನಿಕ ಜೀವನದಲ್ಲಿ ಹೇಗಿರಬೇಕೆಂಬ ಅರಿವು ವ್ಯಕ್ತಿಗೆ ಇರ ಬೇಕು. ಶಾಸಕರಾಗಿ ಸಮಾಜಕ್ಕೆ ಏನು ಸಂದೇಶ ನೀಡುತ್ತಿದ್ದೇವೆಂದು ಯೋಚಿಸಬೇಕಿತ್ತು ಎಂದು ವಾಗ್ದಾಳಿ ನಡೆಸಿ ದರು.

ವಿಧಾನಸಭೆ ಅಧಿವೇಶನದಲ್ಲಿ ಶಾಸಕ ಶಿವಲಿಂಗೇಗೌಡರ ಭಾಷಣ ಒಪ್ಪುವಂತದ್ದಲ್ಲ. ಶಾಸಕ ಶರಣು ಸಲಗಾರ ಅವರ ಪತ್ನಿ ಹಣ ಪಡೆ ಯುತ್ತಿರುವ ದಾಖಲೆಗಳಿದ್ದರೆ ದೂರು ನೀಡಬಹುದು. ಸಂಪುಟದಲ್ಲಿ ತನಗೂ ಅವಕಾಶ ಸಿಗಲಿ ಎಂಬ ಆಸೆಯಿಂದ ಹಾಗೆ ಮಾತನಾಡಿರಬಹುದೆಂದು ವ್ಯಂಗ್ಯವಾಡಿದರು.

ಯಾರೇ ಆಗಲಿ ಪದ ಬಳಕೆ ಮಾಡುವಾಗ ಎಚ್ಚರ ವಹಿಸಬೇಕಾಗುತ್ತದೆ. ಕಲಾಪ ವೀಕ್ಷಿಸಲು ಶಾಲಾ ಮಕ್ಕಳು ಬಂದಿರುತ್ತಾರೆಂಬ ಪರಿಜ್ಞಾನ ಇರಬೇಕು. ಮಕ್ಕಳು ನಮ್ಮ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ, ಶಾಸಕರ ಯೋಗ್ಯತೆ ಇಷ್ಟೇ ಎಂದು ಭಾವಿಸುತ್ತಾರೆಂದರು.

## ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಹೆಚ್ಚುವರಿ ಅನುದಾನ : ಜಿ.ಪರಮೇಶ್ವರ್



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಿರೀಸಾವೆ ಗ್ರಾಮದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಹೆಚ್ಚುವರಿ ಅನುದಾನ ನೀಡಲಾಗುವುದೆಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ಭರವಸೆ ನೀಡಿದರು.

ಶುಕ್ರವಾರ ಬೆಂಗಳೂರಿನಿಂದ ಚಿಕ್ಕಮಗಳೂರಿಗೆ ತೆರಳುತ್ತಿದ್ದ ಅವರನ್ನು ಹಿರೀಸಾವೆಯಲ್ಲಿ ಕಾಂಗ್ರೆಸ್ ಮುಖಂಡರು ಹಾಗು ಅಭಿಮಾನಿಗಳು ಸ್ವಾಗತಿಸಿದ ವೇಳೆ ಮಾತನಾಡಿದ ಸಚಿವರು, ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪ್ರತಿಮೆ ಶಂಕುಸ್ಥಾಪನೆಗೆ ದಿನಾಂಕ ನಿಗದಿಪಡಿಸಲಾಗುವುದು. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸರ್ಕಾರದಿಂದ 75 ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ. ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು. ಹೆಚ್ಚುವರಿ ಅನುದಾನ ಬೇಕಿದ್ದರೆ ಕಲ್ಪಿಸಲಾಗುವುದೆಂದರು.

ರಾಜ್ಯದ ವಿವಿಧೆಡೆ ನಿರ್ಮಾಣ ಹಂತದಲ್ಲಿರುವ ಅಂಬೇಡ್ಕರ್ ಪುತ್ಥಳಿ ಹಾಗು ಭವನ ಕಾಮಗಾರಿಗೆ ಸರ್ಕಾರದಿಂದ ಹಂತ-ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ನಿರ್ಮಾಣ ಕಾರ್ಯವು ಪ್ರಗತಿಯಲ್ಲಿ ಸಾಗುತ್ತಿದ್ದು, ವರ್ಷಾಂತ್ಯದಲ್ಲಿ ಲೋಕಾರ್ಪಣೆಗೊಳ್ಳಲಿವೆ ಎಂದು ತಿಳಿಸಿದರು. ಡಾ.ಜಿ.ಪರಮೇಶ್ವರ್ ಯುವಕರ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ ಮೌರ್ಯ, ಹೊಸಹಳ್ಳಿ ಅಣ್ಣಯ್ಯ, ಕಾಂಗ್ರೆಸ್ ಮುಖಂಡರಾದ ಉದಯಕುಮಾರ್, ಮಹೇಶ್, ದಲಿತಪರ ಸಂಘಟನೆಗಳ ಕಾರ್ಯಕರ್ತರು ಹಾಜರಿದ್ದರು.

# ಬಿಜೆಪಿ ಪ್ರಚೋದನೆಗೆ ಆವೇಶ ಭರಿತನಾಗಿ ಮಾತನಾಡಿದೆ

## ನನ್ನನ್ನು ಅಪದ್ಧ ಪದಗಳಿಂದ ನಿಂದಿಸಿದರು : ವಿಡಿಯೋ ಬಿಡುಗಡೆ ಮಾಡಿದ ಕೆ.ಎಂ.ಶಿವಲಿಂಗೇಗೌಡ

• ಪ್ರಜೋದಯ ವರದಿ

**ಅರಸೀಕೆರೆ:** ಸದನದಲ್ಲಿ ನನ್ನನ್ನು ಬಿಜೆಪಿಯವರು ಪ್ರಚೋದನೆ ಮಾಡಿದ್ದರಿಂದಲೇ ಆವೇಶ ಭರಿತನಾಗಿ ಮಾತನಾಡಿದೆ. ಅವರು ಅವಾಚ್ಯವಾಗಿ, ಅಶ್ಲೀಲವಾಗಿ ಮಾತನಾಡಿದರು. ಆದರೆ, ಅವೆಲ್ಲಾ ದಾಖಲಾಗಿಲ್ಲ, ನಾನು ಮಾತನಾಡಿದ್ದು ಮಾತ್ರ ದಾಖಲಾಗಿದೆ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ತಮ್ಮ ನಡೆಯನ್ನು ಸಮರ್ಥಿಸಿಕೊಂಡರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಶಾಸಕರು ನಿಂದಿಸಿರುವ ವಿಡಿಯೋ ಬಿಡುಗಡೆ ಮಾಡಿ ಮಾತನಾಡಿದ ಅವರು, ನಾನು ಸಾಕಷ್ಟು ಸಮಾಧಾನದಿಂದಲೇ ಇದ್ದೆ. ಆದರೆ, ಅವರು ನಡೆದುಕೊಂಡ ರೀತಿ ಸಹಿಸುವಂತಹದಲ್ಲ. ನಾನು ಮಾತನಾಡಲು ನಿಂತಾಗ ವೇದವ್ಯಾಸ ಕಾಮತ್, ಶರಣು ಸಲಗಾರ್, ಸುರೇಶ್‌ಗೌಡ ಅವರ ಗುಂಪು ಸಾಕಷ್ಟು ತೊಂದರೆ ನೀಡುತ್ತಿತ್ತು. ಕಲಾಪ ಮುಗಿದ ಮೇಲೆ ಯಾಕಪ್ಪ ಹೀಗೆ ಮಾಡುತ್ತೀರಾ ಎಂದರೆ ನಾವು ಆರ್‌ಎಸ್‌ಎಸ್‌ನವರು ಎಂದರು. ನಾನು ಅದಕ್ಕೆ ಅವರಿಗೆ ಆರ್‌ಎಸ್‌ಎಸ್ ಎಂದು ಕರೆದಿದ್ದು, ಬೇರೆ ಯಾರಿಗೂ ಹೇಳಿಲ್ಲವೆಂದು ಸ್ಪಷ್ಟಪಡಿಸಿದರು.



> **ಬಿಜೆಪಿಯವರು ನನ್ನ ಮೇಲೆ ಏಕೆ ಇಷ್ಟೊಂದು ಜಿದ್ದು ಸಾಧಿಸುತ್ತಿದ್ದಾರೆ, ನಾನು ಪಕ್ಷ ಬದಲಾಯಿಸಿದರೆ ಇವರಿಗೇನು, ನಾನು ಮಾಡಿರುವ ಮಹಾಪರಾಧವೇನು, ನಾನೇನಾದರೂ ಜೆಡಿಎಸ್ ಚಿಹ್ನೆಯಡಿ ಗೆದ್ದು ಪಕ್ಷ ಬಿಟ್ಟು ಹೋಗಿದ್ದೀನಾ, ಹಾಗೆ ಮಾಡಿದ್ದರೆ ಮೋಸ ಮಾಡಿದ್ದೇನೆ ಎನ್ನಬಹುದು.**
>
> **-ಕೆ.ಎಂ.ಶಿವಲಿಂಗೇಗೌಡ, ಶಾಸಕ**

ನಾನೇಕೆ ಆರ್‌ಎಸ್‌ಎಸ್ ಬಗ್ಗೆ ಬೈಯ್ಯಲಿ, ನಾನು ಅವರನ್ನು ಆರ್‌ಎಸ್‌ಎಸ್ ಎಂದು ಕರೆಯುತ್ತಿದ್ದೆ. ನನ್ನನ್ನು ಕಳ್ಳ ಎಂದು ಕೂಗುತ್ತಿದ್ದರು. ಅಬಕಾರಿ ಮಂತ್ರಿ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದರು. ಅವರ ಮೇಲೆ ಕೂಗಾಡಲಿ, ಆರೋಪ ಸಾಬೀತು ಮಾಡಲಿ ಅದನ್ನು ಬಿಟ್ಟು ನನ್ನನ್ನು ಏಕೆ ಟಾರ್ಗೆಟ್ ಮಾಡಿದರೆಂದು ಪ್ರಶ್ನಿಸಿದ ಅವರು, ನಾನು ಮಾತನಾಡಿದ್ದಷ್ಟೇ ಪ್ರಚಾರ ಆಗಿದೆ, ಅವರು ಮಾತನಾಡಿದ್ದು ಬಂದಿಲ್ಲ. ಟಿವಿ, ಮಾಧ್ಯಮದವರು ಸದನದ ಒಳಗೆ ಇದ್ದಿದ್ದರೆ ಹೀಗೆ ಆಗುತ್ತಿರಲಿಲ್ಲ. ಮುಂದೆ ಎಲ್ಲಾ ಮಾಧ್ಯಮದವರು ಸದನದೊಳಗೆ ಬರಲೇಬೇಕೆಂದರು.

**ನನಗೂ ನ್ಯಾಯ ಬೇಕು**

**ಬಿಜೆಪಿಯವರು ಅಶ್ಲೀಲ ಪದ ಬಳಕೆಗೆ ನಾನೂ ಸ್ವಲ್ಪ ಪ್ರಚೋದನೆಗೊಂಡಿದ್ದೇನೆ. ಸಲಗಾರ್ ಅವರ ಹೆಂಡತಿ ತಹಶೀಲ್ದಾರ್ ಎಂದು ಯಾರೋ ಹೇಳಿದರು, ಅದರಿಂದ ನಾನು ಅವರಿಗೆ ನಿನ್ನ ಹೆಂಡತಿ ತಹಶೀಲ್ದಾರ್ ಆಗಿದ್ದಕ್ಕೆ ನೀನು ಗೆದ್ದಿದ್ದೀಯಾ ಎಂದು ಹೇಳಿದ್ದೇನೆ. ಅದನ್ನು ಬಿಟ್ಟು ನನ್ನ ಮಾತಿನಲ್ಲಿ ಬೇರೆ ದುರುದ್ದೇಶ ಇರಲಿಲ್ಲ. ನಾನು ಹೆಣ್ಣುಮಗಳ ಬಗ್ಗೆ ಮಾತಾಡಿದ್ದಕ್ಕೆ ನಮಸ್ಕಾರ ಮಾಡಿ ಕ್ಷಮೆ ಕೇಳುವೆ. ಆದರೆ, ಅವರೆಲ್ಲಾ ನನ್ನ ಮೇಲೆ ಮಾತಾಡಿರುವುದಕ್ಕೆ ಏನು ಮಾಡುತ್ತಾರೆ, ನನಗೂ ನ್ಯಾಯ ಬೇಕೆಂದು ಆಗ್ರಹಿಸಿದರು.**

ಮುಂದೆ ಚುನಾವಣೆಗೆ ನಿಲ್ಲುವುದು ನನಗೆ ಬಿಟ್ಟ ವಿಚಾರ. ಈ ವಿಚಾರ ರಾಜ್ಯದ ಜನತೆಗೆ ಗೊತ್ತಾಗಬೇಕು, ನನ್ನ ವಿರುದ್ಧ ಹೇಗೆ ಪ್ರಚೋದನೆ ಮಾಡಿದರು ಅನ್ನೋದು ಹೊರಗೆ ಬಂದಿಲ್ಲ. ನನಗೆ ಸಿಕ್ಕಷ್ಟು ವಿಡಿಯೋ ತುಣುಕು ಬಿಡುಗಡೆ ಮಾಡಿದ್ದೇನೆ. ನನ್ನನ್ನು ನಿಂದಿಸಿದರೂ ಒಂದೇ, ನನ್ನ ಕ್ಷೇತ್ರದ ಜನರ ಬೈಯ್ಯೋದು ಒಂದೇ. ಸಚಿವ ಪ್ರಿಯಾಂಕ ಖರ್ಗೆ ಅವರು 1 ಗಂಟೆ ಭಾಷಣ ಮಾಡಿದರು. ಆ ವೇಳೆ ಕಾಂಗ್ರೆಸ್‌ನ ಬೈದರೇ ಹೊರತು ಪ್ರಿಯಾಂಕ್ ಬಗ್ಗೆ ಮಾತನಾಡಿಲ್ಲ. ಆದರೆ, ನನ್ನನ್ನು ಏಕೆ ಇಷ್ಟೊಂದು ದ್ವೇಷ ಮಾಡುತ್ತಿದ್ದಾರೆ. ನಾನು ಹಳ್ಳಿ ಭಾಷೆಯಲ್ಲಿ ಮಾತನಾಡಿದ್ದೇನೆ ಅಷ್ಟೆ ಎಂದು ಸಮಜಾಯಿಷಿ ನೀಡಿದರು.

ಬಿಜೆಪಿ ಶಾಸಕರು ಧರಣಿಯ ಅರ್ಥ ಹಾಳು ಮಾಡಿದ್ದಾರೆ. ಅಹೋರಾತ್ರಿ ಧರಣಿ ಮಾಡಿ ಸದನದಲ್ಲಿ ಡ್ಯಾನ್ಸ್ ಮಾಡಿದ್ದಾರೆ. ಪದಗಳ ಬಳಕೆಗೆ ನನಗೆ ಬೇಜಾರಿದೆ, ಜನರಿಗೂ ಬೇಜಾರಿದೆ. ಆದರೆ, ಅಸಂಬದ್ಧವಾಗಿ ಬೈದಾಗ ಏನು ಮಾಡಬೇಕು, ನಾನು ಕೂಡ ಮನುಷ್ಯ ಅಲ್ಲವೇ, ನಾನು ಮಾತನಾಡಿದ್ದು ಪ್ರಸಾರ ಆಗುತ್ತಿದೆ, ನಾನೀಗ ಅವರು ಮಾಡಿದ್ದನ್ನು ತೋರಿಸಿದ್ದೇನೆ ಎಂದರು.

## ಇಂದು ಹೆಚ್.ಎಂ.ಶಿವಣ್ಣಗೆ ಶ್ರದ್ಧಾಂಜಲಿ

• ಪ್ರಜೋದಯ ವರದಿ



**ಹಾಸನ:** ಸ್ವಾತಂತ್ರ್ಯ ಹೋರಾಟಗಾರ ದಿ.ಹೆಚ್.ಎಂ.ಶಿವಣ್ಣ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಫೆ.7ರ ಶನಿವಾರ ಬೆಳಿಗ್ಗೆ 9.30ಕ್ಕೆ ಹಮಿಕೊಳ್ಳಲಾಗಿದೆ.

ಶ್ರೀ ಅರುಣೋದಯ ವಿವೇಕಾನಂದ ವಿದ್ಯಾಸಂಸ್ಥೆ ಹಾಗು ಚಿಗಳ್ಳಿ ಆರ್.ಡಿ.ಗೌಡ ಅವರ ಸಹಯೋಗದಲ್ಲಿ ಕಾರ್ಯಕ್ರಮ ಏರ್ಪಡಿಸಿದ್ದು, ಇದೇ ಸಂದರ್ಭದಲ್ಲಿ ಮರ್ಕುಲಿ ಗ್ರಾಮದ ದಿ.ದ್ಯಾವೇಗೌಡ್ರ ಸಹೋದರಿ ಸಾತೇನಹಳ್ಳಿಯ ದಿ.ದ್ಯಾವಮ್ಮ ಕೃಷ್ಣೇಗೌಡ ಹಾಗು ಚಿಗಳ್ಳಿಯ ಆರ್.ಡಿ.ಗೌಡರ ಸಹೋದರಿ ದಿ.ನಾಗರತ್ನ ಮಂಜೇಗೌಡ ಅವರಿಗೂ ಶ್ರದ್ಧಾಂಜಲಿ ನೆರವೇರಲಿದೆ.

ಕಾರ್ಯಕ್ರಮದ ಅಂಗವಾಗಿ ಶ್ರೀ ಲಕ್ಷ್ಮೀ ರಂಗನಾಥಸ್ವಾಮಿ ಸೌರಭ ಕಲಾ ಸಂಘದ ಮಹಿಳಾ ಕಲಾವಿದರಿಂದ ಧರ್ಮರಾಜ್ಯ ಸ್ಥಾಪನೆ ಪೌರಾಣಿಕ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಆದಿ ಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಜವೇನಹಳ್ಳಿ ಮಠದ ಶ್ರೀ ಸಂಗಮೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮಾಜಿ ಸಚಿವ ಹೆಚ್.ಡಿ.ರೇವಣ್ಣ ಸಮಾರಂಭ ಉದ್ಘಾಟಿಸಲಿದ್ದು, ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ. ನಗರಸಭೆ ಮಾಜಿ ಅಧ್ಯಕ್ಷ ಚನ್ನವೀರಪ್ಪ, ಕಮಲ್ ಕುಮಾರ್, ಪಿ.ಎಂ.ಗುರುಮೂರ್ತಿ, ಬಿ.ಎಸ್. ಪುಟ್ಟಸ್ವಾಮಿಗೌಡ ಭಾಗವಹಿಸಲಿದ್ದಾರೆ.

# ದೇಶಿ ಜಾನುವಾರುಗಳ ಉಳಿವಿಗೆ ಪ್ರೋತ್ಸಾಹ ಅಗತ್ಯ

## ಚಂದ್ರಮೌಳೇಶ್ವರ ರಥೋತ್ಸವ ದನಗಳ ಜಾತ್ರೆಗೆ ಶಾಸಕ ಸಿ.ಎನ್.ಬಾಲಕೃಷ್ಣ ಚಾಲನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ** :ದೇಶಿ ತಳಿಯ ಜಾನುವಾರಗಳ ರಕ್ಷಣೆಗೆ ಸರ್ಕಾರ ಹೆಚ್ಚಿನ ಅನುದಾನ ನೀಡಿ ರೈತರನ್ನು ಪ್ರೋತ್ಸಾಹಿಸಬೇಕೆಂದು ಶಾಸಕ ಸಿ. ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ಪುರಸಭಾ ಮುಂಭಾಗದಲ್ಲಿ ಶುಕ್ರವಾರ ಚಂದ್ರಮೌಳೇಶ್ವರ ರಥೋತ್ಸವದ ಅಂಗವಾಗಿ 87ನೇ ದನಗಳ ಜಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಆಧುನಿಕ ಕೃಷಿ ಪದ್ಧತಿಯಿಂದ ಹಳ್ಳಿಗಳಲ್ಲಿ ದನಗಳನ್ನು ಸಾಕುವವರ ಸಂಖ್ಯೆ ಕ್ಷೀಣಿಸುತ್ತಿದೆ. ಹಿಂದಿನ ಕಾಲದಲ್ಲಿ ಉಳುಮೆ ಮಾಡಲು ಪ್ರತಿ ರೈತರ ಮನೆಯಲ್ಲೂ ಒಂದು ಅಥವಾ ಎರಡು ಜೋಡಿ ಎತ್ತುಗಳು ಇರುತ್ತಿದ್ದವು. ಆದರೆ, ಇಂದು ಉಳುಮೆ ಮಾಡುವ ರೈತರೇ ಇಲ್ಲವಾಗಿದ್ದಾರೆ. ನೇಗಿಲ ಯೋಗಿಗಳ ಅಭಾವದಿಂದ ಈಗ ಟ್ರ್ಯಾಕ್ಟರ್ ಮೂಲಕ ಉಳುಮೆ ಮಾಡುವಂತಾಗಿದೆ. ಹೈನುಗಾರಿಕೆ ಮಾಡುವ ಉದ್ದೇಶದಿಂದ ಸಾಕಿರುವ ಹಸುಗಳನ್ನು ಬಿಟ್ಟರೆ ಹಳ್ಳಿಗಳಲ್ಲಿ ನಾಟಿ ರಾಸುಗಳೇ ಇಲ್ಲವಾಗಿವೆ ಎಂದರು.



ಹಸುಗಳು ನಮ್ಮ ಆರ್ಥಿಕತೆಯ ಬೆನ್ನೆಲುಬು, ದೇಸಿ ತಳಿ ರಾಸುಗಳ ರಕ್ಷಣೆ ಕೇವಲ ಉಳುಮೆ ಮಾಡಲು ಅಲ್ಲ ಅದೊಂದು ಸೇವೆ ಹಾಗೂ ಅದನ್ನು ಸಂರಕ್ಷಿಸುವ ಹೊಣೆ ನಮ್ಮ ಮೇಲಿದೆ. ನಮ್ಮ ಕಾಲಕ್ಕೆ ದೇಸಿ ರಾಸುಗಳ ಹಲವು ತಳಿಗಳು ನಶಿಸುವ ಹಂತ ತಲುಪಿವೆ. ಈಗಲಾದರೂ

» ನಾಲ್ಕನೇ ಪುಟದಲ್ಲಿ

## ಚಿನ್ನಾಭರಣ ಕಳವು

**ಚನ್ನರಾಯಪಟ್ಟಣ:** ಮನೆ ಬೀಗ ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 1.14 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಉತ್ತೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸುರೇಶ್ ಅವರು ಗುರುವಾರ ಬೆಳಿಗ್ಗೆ ಪತ್ನಿಯನ್ನು ಉದಯಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಸಂಜೆ ಬಂದು ನೋಡಿದಾಗ ಮನೆ ಬಾಗಿಲು ಮುರಿದು ಬೀರುವಿನಲ್ಲಿಟ್ಟಿದ್ದ 1.14 ಲಕ್ಷ ರೂ. ಮೌಲ್ಯದ ಚಿನ್ನ, 50 ಸಾವಿರ ರೂ. ನಗದು, 200 ಗ್ರಾಂ ತೂಕದ ಬೆಳ್ಳಿ ಆಭರಣ ಕಳವು ಮಾಡಿದ್ದಾರೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ತಾಯಿ ಕೊಂದ ಪುತ್ರನಿಗೆ 6 ವರ್ಷ ಜೈಲು ಶಿಕ್ಷೆ

• ಪ್ರಜೋದಯ ವರದಿ

**ಹಾಸನ:** ಚಿನ್ನಾಭರಣ ಗಿರವಿ ಇಟ್ಟಿದ್ದರ ಚೀಟಿ ಕೇಳಿದ ತಾಯಿಯನ್ನು ಕೊಲೆ ಮಾಡಿದ್ದ ಪುತ್ರನಿಗೆ 6 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗು 10 ಸಾವಿರ ರೂ. ದಂಡ ವಿಧಿಸಿ ಜಿಲ್ಲಾ ನ್ಯಾಯಾಲಯ ತೀರ್ಪು ನೀಡಿದೆ.

ತಾಲ್ಲೂಕಿನ ಸಂಕಲಾಪುರದ ನಂಜೇಶಗೌಡ ಅಪರಾಧಿ. ತಾಯಿ ಸಣ್ಣಮ್ಮ ಮೃತರು. ನಂಜೇಶಗೌಡ ತನ್ನ ತಾಯಿ, ಹೆಂಡತಿ ಹಾಗು ಇಬ್ಬರು ಮಕ್ಕಳೊಂದಿಗೆ ವಾಸವಿದ್ದರು. ಗಾರ್ಮೆಂಟ್ ಕೆಲಸಕ್ಕೆ ಹೋಗುತ್ತಿದ್ದ ನಂಜೇಶಗೌಡ ಮದ್ಯದ ದಾಸರಾಗಿ ಮನೆಯಲ್ಲೇ ಇರುತ್ತಿದ್ದರು. ಕುಡಿಯಲು ಹಣ ಕೊಡುವಂತೆ ಯಾವಾಗಲೂ ಗಲಾಟೆ ಮಾಡುತ್ತಿದ್ದ. ಭೋಗ್ಯಕ್ಕೆ ಮನೆ ಪಡೆದಿದ್ದ ನಂಜೇಶಗೌಡರ ಪತ್ನಿ ಹಣ ಹೊಂದಿಸಲು ತಮ್ಮ ಚಿನ್ನಾಭರಣಗಳನ್ನು ಬ್ಯಾಂಕ್‌ನಲ್ಲಿ ಗಿರವಿ ಇಟ್ಟಿದ್ದರು. ಆದರೆ, ಅದರ ಚೀಟಿ ನಂಜೇಶಗೌಡರ ಬಳಿ ಇತ್ತು. ಅದನ್ನು ಕೊಡುವಂತೆ ತಾಯಿ ಸಣ್ಣಮ್ಮ ಮತ್ತು ಪತ್ನಿ ಯಾವಾಗಲೂ ಕೇಳುತ್ತಿದ್ದರು. ಈ ವಿಚಾರವಾಗಿ ಆಗಾಗ ಗಲಾಟೆ ಆಗುತ್ತಿದ್ದವು. ಒಂದು ದಿನ ಇದೇ ವಿಚಾರವಾಗಿ ಜಗಳ ಶುರುವಾದಾಗ ಕುಡಿದ ಅಮಲಿನಲ್ಲಿ ನಂಜೇಶಗೌಡ ಮರದ ತುಂಡಿನಿಂದ ತಾಯಿಯ ತಲೆಗೆ ಹೊಡೆದಿದ್ದ. ಗಂಭೀರ ಗಾಯಗೊಂಡಿದ್ದ ಸಣ್ಣಮ್ಮ ಸ್ಥಳದಲ್ಲೇ ಮೃತಪಟ್ಟಿದ್ದರು. ನಂತರ ಹೋಟೆಲ್ ಕೆಲಸಕ್ಕೆ ತೆರಳಿದ್ದ ಪತ್ನಿಯ ಬಳಿಗೆ ತೆರಳಿ ಅವರ ಮೇಲೂ ಹಲ್ಲೆ ನಡೆಸಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿ ಕೊಂಡಿದ್ದ ಗ್ರಾಮಾಂತರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್.ಎ. ಹಿದಾಯತ್ ಉಲ್ಲಾ ಷರೀಫ್ ಅವರು ನಂಜೇಶಗೌಡರ ಮೇಲಿರುವ ದೋಷಾರೋಪ ಸಾಬೀತಾಗಿದೆಯೆಂದು 6 ವರ್ಷ ಕಠಿಣ ಕಾರಗೃಹವಾಸ ಶಿಕ್ಷೆ ಮತ್ತು 10 ಸಾವಿರ ರೂ. ದಂಡ ವಿಧಿಸಿದ್ದಾರೆ. ಸರ್ಕಾರದ ಪರವಾಗಿ ಪಾರ್ವತಿ ವಾದ ಮಂಡಿಸಿದ್ದರು.

## ಇಂದಿನಿಂದ ಮೂರು ದಿನ ಕಾನೂನು ಕಾರ್ಯಾಗಾರ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ನ್ಯಾಯಾಲಯ ಸಂಕೀರ್ಣದ 3ನೇ ಮಹಡಿಯಲ್ಲಿ ಫೆ.7 ರಿಂದ 10ರವರೆಗೆ ಕಾನೂನು ಕಾರ್ಯಾಗಾರವನ್ನು ರಾಜ್ಯ ವಕೀಲರ ಪರಿಷತ್, ಜಿಲ್ಲಾ ವಕೀಲರ ಸಂಘ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಹಮ್ಮಿಕೊಳ್ಳಲಾಗಿದೆ.

ಶನಿವಾರ ಬೆಳಿಗ್ಗೆ 10 ಗಂಟೆಗೆ ಕಾರ್ಯಾಗಾರದ ಉದ್ಘಾಟನೆಯನ್ನು ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಅವರು ನೆರವೇರಿಸುವರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿ.ಕೆ. ದಾಕ್ಷಾಯಿಣಿ ಭಾಗವಹಿಸುವರು.

ಮಧ್ಯಾಹ್ನ 12.30ಕ್ಕೆ ಅಧಿವೇಶನ-1 ಆರಂಭವಾಗಲಿದ್ದು, ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಅವರು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ ಸಾಕ್ಷ್ಯದ ಮೌಲ್ಯಮಾಪನದ ಬಗ್ಗೆ ಉಪನ್ಯಾಸ ನೀಡುವರು. ಅಧಿವೇಶನ-2ರಲ್ಲಿ ಮಧ್ಯಾಹ್ನ 3 ಗಂಟೆಗೆ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೆಚ್.ಆರ್.ರವಿಕುಮಾರ್ ಅವರು ದಸ್ತಾವೇಜುಗಳ ನೋಂದಣಿ ಮತ್ತು ಅವುಗಳ ಪರಿಣಾಮ ಕುರಿತು ಉಪನ್ಯಾಸ ನೀಡುವರು.

ಫೆ.9ರಂದು ಬೆಳಿಗ್ಗೆ 10.30ಕ್ಕೆ ಅಧಿವೇಶನ-3ರಲ್ಲಿ ಕರ್ನಾಟಕ ವಿಧಿ ವಿಜ್ಞಾನ ಪ್ರಯೋಗಾಲಯದ ಉಪನಿರ್ದೇಶಕ ಡಾ.ವಿನೋದ್ ಜೆ.ಲಕ್ಕಪ್ಪನ್ ಅವರು ಅಪರಾಧ ತನಿಖೆಯಲ್ಲಿ ಡಿಎನ್‌ಎ ಮಹತ್ವ ಕುರಿತು ಉಪನ್ಯಾಸ ನೀಡುವರು. ಅಧಿವೇಶನ-4 ಮಧ್ಯಾಹ್ನ 12.45ಕ್ಕೆ ಆರಂಭವಾಗಲಿದ್ದು, ಡಿಜಿಟಲ್ ಫಾರೆನ್ಸಿಕ್ಸ್ ಕುರಿತು ಕರ್ನಾಟಕ ವಿಧಿ ವಿಜ್ಞಾನ ಪ್ರಯೋಗಾಲಯದ ಹಿರಿಯ ವೈಜ್ಞಾನಿಕ ಅಧಿಕಾರಿ ಡಾ. ಚತುರ್ಮುಖ ಅವರು ಉಪನ್ಯಾಸ ನೀಡುವರು. ಅಧಿವೇಶನ-5 ಮಧ್ಯಾಹ್ನ 3 ಗಂಟೆಗೆ ನಡೆಯಲಿದ್ದು, ಫಾರೆನ್ಸಿಕ್ ಬ್ಯಾಲಿಸ್ಟಿಕ್ ಮತ್ತು ಅಪರಾಧ ಸ್ಥಳದ ತನಿಖೆ ತಂತ್ರಗಳ

» ನಾಲ್ಕನೇ ಪುಟದಲ್ಲಿ

## ಒಂದೇ ವರ್ಷದಲ್ಲಿ 1,272 ಅಪಘಾತ : 281 ಜನರ ಸಾವು, 461 ಮಂದಿಗೆ ಗಂಭೀರ ಗಾಯ

# ರಸ್ತೆ ಅಪಘಾತ : ರಾಜ್ಯದಲ್ಲೇ ಹಾಸನ ಜಿಲ್ಲೆಗೆ 4ನೇ ಸ್ಥಾನ

• ಪ್ರಜೋದಯ ವರದಿ

**ಹಾಸನ :** ಅತೀವೇಗದ ಚಾಲನೆ, ಹೆಲ್ಮೆಟ್ ಧರಿಸದಿರುವುದು, ಪಾನಮತ್ತ ಚಾಲನೆ, ಸಂಚಾರ ನಿಯಮ ಉಲ್ಲಂಘನೆ ಹಾಗು ನಿರ್ಲಕ್ಷ್ಯದಿಂದ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ 1,272 ಅಪಘಾತಗಳು ಸಂಭವಿಸಿ, 281 ಜನರು ಮೃತಪಟ್ಟಿದ್ದಾರೆ. ಹೆಚ್ಚು ಅಪಘಾತ ಸಂಭವಿಸುತ್ತಿರುವ ಜಿಲ್ಲೆಗಳ ಪೈಕಿ ಹಾಸನ ಜಿಲ್ಲೆ ರಾಜ್ಯದಲ್ಲೇ 4ನೇ ಸ್ಥಾನದಲ್ಲಿದೆ.

ಜಿಲ್ಲೆಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲೇ ಅತೀ ಹೆಚ್ಚು ರಸ್ತೆ ಅಪಘಾತಗಳು ನಡೆಯುತ್ತಿವೆ. ಉಳಿದ ಅಪಘಾತಗಳು ರಾಜ್ಯ ಹೆದ್ದಾರಿ ಮತ್ತು ಇನ್ನಿತರೆ ರಸ್ತೆಗಳಲ್ಲಿ ಉಂಟಾಗುತ್ತಿವೆ. ನಗರ ಪ್ರದೇಶದಲ್ಲಿ ಸಾವು-ನೋವು ಸಂಭವಿಸುವಂತಹ ಅಪಘಾತಗಳ ಪ್ರಮಾಣ ಇಳಿಮುಖವಾಗುತ್ತಿದ್ದು, ನಗರ ಹೊರಪ್ರದೇಶಗಳಲ್ಲಿ ಏರಿಕೆಯಾಗುತ್ತಿದೆ. ದ್ವಿಚಕ್ರ ವಾಹನ, ಕಾರುಗಳಲ್ಲೇ ಅತೀ ಹೆಚ್ಚು ಅಪಘಾತಕ್ಕೆ ಒಳಗಾಗುತ್ತಿವೆ.

ಜಿಲ್ಲೆಯಲ್ಲಿ ಸಂಭವಿಸುವ ಅಪಘಾತಗಳಿಗೆ ಪ್ರಮುಖ ಕಾರಣ ವೇಗದ ಚಾಲನೆಯಾಗಿದೆ.



| ವರ್ಷ | ಪ್ರಕರಣ | ಮೃತರು | ಗಂಭೀರ ಗಾಯ |
|---|---|---|---|
| 2022 | 1980 | 500 | 923 |
| 2023 | 2166 | 518 | 911 |
| 2024 | 2267 | 467 | 802 |
| 2025 | 1272 | 281 | 461 |

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿ ಸಾವಿಗೀಡಾದವರ ಸಂಖ್ಯೆ ಹೆಚ್ಚಾಗಿದ್ದು, ಯುವಕರೇ ಎಂಬುವುದು ಕಳವಳದ ಸಂಗತಿ. ವಾಹನ ಚಾಲನೆ ಸಂದರ್ಭ ಮೊಬೈಲ್ ಸೇರಿ ನಾನಾ ಸಂವಹನ ಮಾಧ್ಯಮ ಗಳನ್ನು ಬಳಕೆ ಮಾಡುವುದು ಕೂಡ ಇತ್ತೀಚಿನ ದಿನಗಳಲ್ಲಿ ಅಪಘಾತಕ್ಕೆ ಪ್ರಮುಖ ಕಾರಣವಾಗಿದೆ.



> **ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳನ್ನು ನಿಯಂತ್ರಣಕ್ಕೆ ತರಲು ಜನರ ಸಹಕಾರ ಪಡೆದುಕೊಂಡು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಟ್ರಾಫಿಕ್ ಸಮಸ್ಯೆಯನ್ನು ಹಂತ -ಹಂತವಾಗಿ ಪರಿಹರಿಸಲಾಗುವುದು. ವಾಹನ ಸವಾರರ ಸುರಕ್ಷತೆ ದೃಷ್ಟಿಯಿಂದ ಪ್ರತಿಯೊಬ್ಬರೂ ಸಂಚಾರ ನಿಯಮ ಪಾಲನೆ ಮಾಡಬೇಕು. ಬೈಕ್ ಸವಾರರು ಹೆಲ್ಮೆಟ್ ಧರಿಸುವುದು ಕಡ್ಡಾಯವಾಗಿದೆ.**
>
> **- ಶುಭನ್ವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

**ಅಪಘಾತಗಳ ಅಂಕಿ-ಅಂಶ**

ಅಪಘಾತದಲ್ಲಿ ಸಾವನ್ನಪ್ಪುತ್ತಿರುವವರ ಸಂಖ್ಯೆ ಕಳೆದ ನಾಲ್ಕು ವರ್ಷಗಳಿಗೆ ಹೋಲಿಸಿದರೆ ಸದ್ಯ ಕಡಿಮೆಯಾಗಿದೆ. 2022ನೇ ಸಾಲಿನಲ್ಲಿ 1980 ಅಪಘಾತಗಳು ನಡೆದಿದ್ದು, 500 ಜನರು ಮೃತಪಟ್ಟು, 923 ಜನರು ಗಂಭೀರವಾಗಿ ಗಾಯಗೊಂಡಿದ್ದರು. 2023ನೇ ಸಾಲಿನಲ್ಲಿ 2166 ಅಪಘಾತಗಳು ನಡೆದಿದ್ದು, 518 ಜನರು ಮೃತಪಟ್ಟಿದ್ದರು.

2024ರಲ್ಲಿ 2267 ಅಪಘಾತಗಳಲ್ಲಿ 467 ಜನರು ಮೃಪಟ್ಟಿದ್ದರು. 2025ರಲ್ಲಿ ಅಪಘಾತಗಳ ಸಂಖ್ಯೆ ಶೇ.50 ರಷ್ಟು ಕಡಿಮೆಯಾಗಿದೆ. 1,272 ಅಪಘಾತಗಳಲ್ಲಿ 281 ಜನರು ಮೃತಪಟ್ಟಿದ್ದಾರೆ. ಅಪಘಾತ ಪ್ರಕರಣದಲ್ಲಿ ಬೆಂಗಳೂರು ಪ್ರಥಮ, ಬೆಂಗಳೂರು ಗ್ರಾಮಾಂತರ ದ್ವಿತೀಯ, ವಿಜಾಪುರ ತೃತೀಯ

» ನಾಲ್ಕನೇ ಪುಟದಲ್ಲಿ

**ನಿಯಂತ್ರಣ ಕ್ರಮಗಳು...**

- ವೇಗ ನಿಯಂತ್ರಣ, ಚಾಲನೆ ಸಂದರ್ಭ ಹೆಚ್ಚು ಲಕ್ಷ್ಯ ವಹಿಸುವುದು
- ನಿದ್ದೆಯ ಮಂಪರಿನಲ್ಲಿ ಡ್ರೈವಿಂಗ್ ಮಾಡದಿರುವುದು
- ಅಮಲು ಪದಾರ್ಥ ಸೇವಿಸಿ ಚಾಲನೆ ನಿಷೇಧ
- ವಾಹನಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವುದು
- ರಸ್ತೆ ನಿಯಮಗಳನ್ನು ಪಾಲಿಸುವುದು
- ಸ್ಥಳೀಯ ಆಡಳಿತ ಸಂಸ್ಥೆಗಳು ಸೂಕ್ತ ಮೂಲಭೂತ ಸೌಕರ್ಯ ಒದಗಿಸುವುದು
- ಪಾದಾಚಾರಿಗಳ ಬಗ್ಗೆ ಗಮನ ಹರಿಸುವುದು
- ಪ್ರತಿಯೊಬ್ಬರ ಜೀವ ಅಮೂಲ್ಯ ಎಂಬ ಚಿಂತನೆ ಬೆಳೆಸಿಕೊಳ್ಳುವುದು

CMYK CMYK CMYK CMYK

# ಹಣಕಾಸಿನ ಹಂಚಿಕೆ ಹಾಗೂ ಹತೋಟಿಯ ಹಿತಮಿತ ಹಲ್ವಾ ಬಜೆಟ್

## ವಾರ್ಷಿಕ ಮುಂಗಡಪತ್ರವನ್ನು ಮೂರು ವಿಧಗಳಾಗಿ ವಿಂಗಡಿಸಬಹುದು.

- ಇಲ್ಲಿ ಆದಾಯ ಹಾಗೂ ವೆಚ್ಚಗಳು ಪ್ರಧಾನ ಅಂಶಗಳು. ಹೀಗಾಗಿ ಆದಾಯ-ವೆಚ್ಚದ ಪ್ರಮಾಣವನ್ನು ಆಧರಿಸಿ ಸಂತುಲಿತ ಬಜೆಟ್, ಉಳಿತಾಯ (ಮಿಗತೆ) ಬಜೆಟ್, ಕೊರತೆ ಬಜೆಟ್ ಎಂಬ ಮೂರು ವಿಧಗಳಾಗಿ ವಿಂಗಡಿಸಬಹುದು.
- ಇತ್ತೀಚಿನ ಸರಕಾರಗಳು ಹೆಚ್ಚಾಗಿ ಕೊರತೆಯ ಬಜೆಟ್ಟನ್ನೇ ಮಂಡಿಸುತ್ತಿವೆ.
- ಅಂದರೆ, ನಿರೀಕ್ಷಿತ ಆದಾಯಕ್ಕಿಂತಲೂ, ನಿರೀಕ್ಷಿತ ವೆಚ್ಚ ಹೆಚ್ಚಾಗಿರುತ್ತದೆ!
- ಸನಾತನ ಭಾರತೀಯ ಜೀವನಪದ್ಧತಿದಲ್ಲಿ ಅರ್ಥಕ್ಕೆ (ಸಂಪತ್ತು) ದೈವಿಕ ಸ್ಥಾನವಿದೆ.
- ಭಾರತೀಯರು ಚತುರ್ವಿಧ ಪುರುಷಾರ್ಥಗಳ ಮೇಲೆ ಆಧಾರಿತವಾದ ಜೀವನಕ್ರಮ ಅನುಸರಿಸುತ್ತಾರೆ.
- ಧರ್ಮದ ಹಾದಿಯಲ್ಲಿ ಅರ್ಥವನ್ನು (ಹಣ) ಗಳಿಸಿ, ಆ ಹಣದಿಂದ ತಮ್ಮ ಕಾಮನೆಗಳನ್ನು (ಆಸೆ) ಪೂರೈಸಿಕೊಂಡು, ಅಂತಿಮವಾಗಿ ಮೋಕ್ಷದ ಕಡೆಗೆ ಸಾಗಬೇಕು ಎಂಬುದು ದರ್ಶನ.
- ಈ ನಾಲ್ಕರ ಸಮತೋಲನವೇ ಯಶಸ್ವಿ ಜೀವನ.
- ಸಾಮಾನ್ಯ ಪ್ರಜೆಗಳು ತಮಗಿರುವ ಕುಲಕಸುಬು, ಸಂಪತ್ತು, ಶ್ರೇಯಗಳನ್ನು ದೈವ ಪ್ರಸಾದವೆಂದು ಬಗೆದು ಸಂತೃಪ್ತಿ, ಸಮಾಧಾನದಿಂದ ಬಾಳುತ್ತಿದ್ದ ಕಾಲವಿತ್ತು.
- ತಮ್ಮ ಸಂಪಾದನೆಯ ಒಂದು ದೊಡ್ಡ ಭಾಗವನ್ನು ದಾನ, ಧರ್ಮ, ಪೂಜೆ ಹಾಗೂ ಯಜ್ಞಯಾಗಾದಿಗಳಿಗಾಗಿ ವಿನಿಯೋಗಿಸುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಫೆಬ್ರವರಿ 1ರಂದು ದೇಶದ ವಿತ್ತ ಮಂತ್ರಿಗಳು ವಾರ್ಷಿಕ ಆಯವ್ಯಯಬಜೆಟ್ ಮಂಡನೆ ಮಾಡುತ್ತಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ನಿಮಗೇನನ್ನಿಸಿತು? ಎಂದು ಕೇಳುವುದೂ ಸಾಮಾನ್ಯ ವಿಷಯ. ಒಬ್ಬರೋ ಇಬ್ಬರೋ ಸಂಪಾದನೆ ಮಾಡಿ ತಂದ ಹಣದ ಲೆಕ್ಕವನ್ನೇ ಸರಿಯಾಗಿ ನಿರ್ವಹಿಸಲು ಹೆಣಗಾಡುವ ನಾವು, ಇಂತಹ ವಿಶಾಲ ಮತ್ತು ವಿಶಿಷ್ಟ ದೇಶದ ಬಜೆಟ್ ಬಗ್ಗೆ ತೀರ್ಪು ನೀಡುವುದಕ್ಕೆ ಮುಂದಾಗುತ್ತೇವೆ! ಆದಾಯ ತೆರಿಗೆ ಕಡಿಮೆಯಾಯಿತಾ? ಕೃಷಿ ಸಾಲ ಮನ್ನಾ ಆಗತ್ತಾ? ದಿನನಿತ್ಯದ ವಸ್ತುಗಳ ಬೆಲೆ ಇಳಿಯಿತಾ? ಎಂಬ ಸೀಮಿತ ದೃಷ್ಟಿಕೋನದ ಪ್ರಶ್ನೆಗಳಲ್ಲೇ ಬಜೆಟ್‌ನ ಅರ್ಥವನ್ನು ಹುಡುಕುತ್ತೇವೆ. ನಮ್ಮ ದೃಷ್ಟಿ ಸದಾ ವೈಯಕ್ತಿಕ ಲಾಭದ ಮಿತಿಯಲ್ಲೇ ಸುತ್ತುತ್ತದೆ. ಅಲ್ಲವೇ?

ಪ್ರತಿಯೊಬ್ಬ ಸದ್ಗೃಹಸ್ಥರ ಬದುಕಿನಲ್ಲೂ ಅತ್ಯಗತ್ಯವಾಗಿ ಬೇಕಾದ ವಿದ್ಯೆ ಹಣಕಾಸು ನಿರ್ವಹಣೆ. ಅದನ್ನು ಅರಿಯದೇ, ಸಂಕೀರ್ಣ ಜಗತ್ತಿನ ಹಣಕಾಸು ನಿರ್ಧಾರಗಳನ್ನೂ, ದೇಶದ ಬಜೆಟ್‌ನ ಹೂರಣವನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವೇ? ಅದು ಕಷ್ಟಸಾಧ್ಯ! ಆಧುನಿಕ ಭಾರತದಲ್ಲಿ ವ್ಯಾಪಾರ, ಅರ್ಥ ವ್ಯವಸ್ಥೆ, ಜನಸಂಖ್ಯೆ, ಜನರ ಜೀವನಪದ್ಧತಿ ಗಣನೀಯವಾಗಿ ಬದಲಾಗಿದೆ. ಇಂದು ವಿಶ್ವದಲ್ಲೇ ಅತಿ ದೊಡ್ಡ ಗಣರಾಜ್ಯವಾಗಿರುವ ಭಾರತದ ಆಡಳಿತ ಸೂತ್ರದಲ್ಲಿ ಆರ್ಥಿಕ ನಿರ್ವಹಣೆಗೆ ಬಹಳ ಮಹತ್ವದ ಸ್ಥಾನವಿದೆ. ದೇಶದ ಆರ್ಥಿಕ ಸ್ಥಿತಿಗತಿಯು ವಾರ್ಷಿಕ ಬಜೆಟ್ಟಿನ ಮೇಲೆ ಅವಲಂಬಿತವಾಗಿದೆ. ಹಾಗಾಗಿ ಬಜೆಟ್ ಅಂದರೆ ಏನೆಂದು ಸ್ವಲ್ಪ ತಿಳಿಯೋಣ.

**ಬಜೆಟ್ ಪದದ ಅರ್ಥ:** ಬಜೆಟ್ ಎನ್ನುವ ಪದದ ನಿಜಾರ್ಥ ಬ್ಯಾಗ್ ಅಥವಾ ಪುಟ್ಟ ಬ್ಯಾಗ್. ಫ್ರೆಂಚ್ ಮೂಲದ ಬೊಗೆಟ್ (ಪುಟ್ಟ ಚೀಲ) ಎಂಬ ಪದವು ಕಾಲಕ್ರಮೇಣ ಬಜೆಟ್ ಆಗಿ ಮಾರ್ಪಾಡಾಗಿದೆ. ಬಜೆಟ್ ಎಂದರೆ ಒಂದು ವರ್ಷದ ಅವಧಿಯಲ್ಲಿ ಎಷ್ಟು ಆದಾಯ ಬರುತ್ತದೆ ಮತ್ತು ಎಲ್ಲಿ, ಎಷ್ಟು ಖರ್ಚಾಗಿ ಹೋಗುತ್ತದೆ ಎಂಬುದರ ಕುರಿತು ರೂಪಿಸಲಾದ ಆದಾಯವೆಚ್ಚದ (ಆಯವ್ಯಯ) ಯೋಜನೆ.

**ಬಜೆಟ್‌ನಲ್ಲಿ ಎಷ್ಟು ವಿಧ?:** ವಾರ್ಷಿಕ ಮುಂಗಡಪತ್ರವನ್ನು ಮೂರು ವಿಧಗಳಾಗಿ ವಿಂಗಡಿಸಬಹುದು. ಇಲ್ಲಿ ಆದಾಯ ಹಾಗೂ ವೆಚ್ಚಗಳು ಪ್ರಧಾನ ಅಂಶಗಳು. ಹೀಗಾಗಿ ಆದಾಯ-ವೆಚ್ಚದ ಪ್ರಮಾಣವನ್ನು ಆಧರಿಸಿ ಸಂತುಲಿತ ಬಜೆಟ್, ಉಳಿತಾಯ (ಮಿಗತೆ) ಬಜೆಟ್, ಕೊರತೆ ಬಜೆಟ್ ಎಂಬ ಮೂರು ವಿಧಗಳಾಗಿ ವಿಂಗಡಿಸಬಹುದು. ಇತ್ತೀಚಿನ ಸರಕಾರಗಳು ಹೆಚ್ಚಾಗಿ ಕೊರತೆಯ ಬಜೆಟ್ಟನ್ನೇ ಮಂಡಿಸುತ್ತಿವೆ. ಅಂದರೆ, ನಿರೀಕ್ಷಿತ ಆದಾಯಕ್ಕಿಂತಲೂ, ನಿರೀಕ್ಷಿತ ವೆಚ್ಚ ಹೆಚ್ಚಾಗಿರುತ್ತದೆ! ಸನಾತನ ಭಾರತೀಯ ಜೀವನಪದ್ಧತಿದಲ್ಲಿ ಅರ್ಥಕ್ಕೆ (ಸಂಪತ್ತು) ದೈವಿಕ ಸ್ಥಾನವಿದೆ. ಭಾರತೀಯರು ಚತುರ್ವಿಧ ಪುರುಷಾರ್ಥಗಳ ಮೇಲೆ ಆಧಾರಿತವಾದ ಜೀವನಕ್ರಮ ಅನುಸರಿಸುತ್ತಾರೆ. ಧರ್ಮದ ಹಾದಿಯಲ್ಲಿ ಅರ್ಥವನ್ನು (ಹಣ) ಗಳಿಸಿ, ಆ ಹಣದಿಂದ ತಮ್ಮ ಕಾಮನೆಗಳನ್ನು (ಆಸೆ) ಪೂರೈಸಿಕೊಂಡು, ಅಂತಿಮವಾಗಿ ಮೋಕ್ಷದ ಕಡೆಗೆ ಸಾಗಬೇಕು ಎಂಬುದು ದರ್ಶನ. ಈ ನಾಲ್ಕರ ಸಮತೋಲನವೇ ಯಶಸ್ವಿ ಜೀವನ.

ಸಾಮಾನ್ಯ ಪ್ರಜೆಗಳು ತಮಗಿರುವ ಕುಲಕಸುಬು, ಸಂಪತ್ತು, ಶ್ರೇಯಗಳನ್ನು ದೈವ ಪ್ರಸಾದವೆಂದು ಬಗೆದು ಸಂತೃಪ್ತಿ, ಸಮಾಧಾನದಿಂದ ಬಾಳುತ್ತಿದ್ದ ಕಾಲವಿತ್ತು. ತಮ್ಮ ಸಂಪಾದನೆಯ ಒಂದು ದೊಡ್ಡ ಭಾಗವನ್ನು ದಾನ, ಧರ್ಮ, ಪೂಜೆ ಹಾಗೂ ಯಜ್ಞಯಾಗಾದಿಗಳಿಗಾಗಿ ವಿನಿಯೋಗಿಸುತ್ತಿದ್ದರು.

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್

**ಅರ್ಥ:** ಯಾರು ಬೇರೆ ಯಾವುದನ್ನೂ ಚಿಂತಿಸದೇ ನನ್ನನ್ನೇ ಆರಾಧಿಸುತ್ತಾರೋ, ಅಂತಹವರ ಯೋಗ (ಹೊಸದನ್ನು ಗಳಿಸುವ ಯೋಗ) ಮತ್ತು ಕ್ಷೇಮ (ಗಳಿಸಿದ್ದನ್ನು ರಕ್ಷಿಸುವುದು) ಈ ಎರಡನ್ನೂ ನಾನೇ ವಹಿಸಿಕೊಳ್ಳುತ್ತೇನೆ ಎಂದು ಕೃಷ್ಣನು ಭರವಸೆ ನೀಡಿರುವುದನ್ನು 9ನೇ ಅಧ್ಯಾಯವಾದ ರಾಜವಿದ್ಯಾ ರಾಜಗುಹ್ಯ ಯೋಗದಲ್ಲಿ ಕಾಣಬಹುದು.

ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ

**ಅರ್ಥ:** ಎಲ್ಲಿ ಯೋಗೇಶ್ವರನಾದ ಕೃಷ್ಣ (ಜ್ಞಾನ) ಮತ್ತು ಧನುರ್ಧರನಾದ ಅರ್ಜುನ (ಕ್ರಿಯೆ/ ಶ್ರಮ) ಇರುತ್ತಾರೋ, ಅಲ್ಲಿ ಶ್ರೀ (ಸಂಪತ್ತು) ಮತ್ತು ವಿಜಯ ಖಂಡಿತವಾಗಿಯೂ ಇರುತ್ತವೆ. ಅಂದರೆ, ಜ್ಞಾನ ಮತ್ತು ಶ್ರಮ ಎರಡೂ ಸೇರಿದಾಗ ಮಾತ್ರ ಸಮೃದ್ಧಿ ನೆಲೆಸುತ್ತದೆ.

ಕೌಟುಂಬಿಕ ಜೀವನವನ್ನು ಸರಿದೂಗಿಸಿ ನಡೆಸಲಿಕ್ಕಾಗಿ ಹಣಕಾಸು ನಿರ್ವಹಣೆ ಮಾಡಬೇಕಾದಾಗ ಭವಿಷ್ಯದ ಬಗೆಗೆ ಅನಿಶ್ಚಿತತೆ ಕಾಡಿ ಜನಸಾಮಾನ್ಯನೊಬ್ಬನು ಆತಂಕಿತನಾದರೆ, ಅಂಥವನಿಗೆ ಇದೊಂದು ಲಕ್ಷ್ಮೀಕಾಂತನ ಆತ್ಮೀಯ ಆಶ್ವಾಸನೆಯಲ್ಲವೇ? ಇನ್ನು ಐತಿಹಾಸಿಕವಾಗಿ ನೋಡಿದರೆ, ರಾಜ-ಮಹಾರಾಜರು, ಸಾಮಂತರು, ಸಚಿವರು ರಾಜ್ಯಾಡಳಿತಕ್ಕಾಗಿ, ಸೌಕರ್ಯಗಳ ಅಭಿವೃದ್ಧಿಗಾಗಿ, ಪ್ರಜೆಗಳ ಹಿತ ಕಾಪಾಡಲು ಬೊಕ್ಕಸಗಳಲ್ಲಿ ಕರ-ಸಂಗ್ರಹದ ಮೂಲಕ ಸಂಪತ್ತನ್ನು ಕೂಡಿಡುತ್ತಿದ್ದರು ಎಂಬುದು ತಿಳಿದ ವಿಷಯವೇ. ಬೊಕ್ಕಸದ ಸಮರ್ಪಕ ಹಂಚಿಕೆ, ನಿರ್ವಹಣೆ, ಯೋಜನೆ, ಸದ್ವಿನಿಯೋಗ, ಹಾಗೂ ನಿಯಂತ್ರಣಗಳ ಅರಿವು ಈ ಭಾರತದ ನೆಲದಲ್ಲಿ ಅನಾದಿ ಕಾಲದಿಂದ ಇದೆ.



ಅರ್ಥಶಾಸ್ತ್ರದ ಬಗೆಗೆ ಅತ್ಯಂತ ಮಹತ್ವವಾದ ಸರ್ವಕಾಲಿಕ ವಿಷಯಗಳನ್ನು ಆಚಾರ್ಯ ಚಾಣಕ್ಯರು ತಮ್ಮ ಚಾಣಕ್ಯ ನೀತಿಯಲ್ಲಿ ವಿಸ್ತೃತವಾಗಿ, ಬರೆದಿದ್ದಾರೆ. ಹಾಗಾಯೇ ತಾನೇ ಬೆಳೆಸಿ ಚಕ್ರವರ್ತಿಯನ್ನಾಗಿ ಸ್ಥಾಪಿಸಿದ ಚಂದ್ರಗುಪ್ತ ಮೌರ್ಯನಿಗೆ ರಾಜನೀತಿ, ಆಡಳಿತ, ಆರ್ಥಿಕ ಸಲಹೆ, ಸೂಚನೆಗಳನ್ನು ಕೊಟ್ಟ ಮಾರ್ಗದರ್ಶಕನೇ ಚಾಣಕ್ಯ. ಚಾಣಕ್ಯ-ನೀತಿ ಕೇವಲ ಒಂದು ರಾಷ್ಟ್ರ ಅಥವಾ ರಾಜ್ಯದ ದೊರೆ, ಮಂತ್ರಿ, ಅಧಿಕಾರಿಗಳಿಗೆ ಸೀಮಿತವಾಗಿರದೇ, ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಜೀವನವನ್ನು ಶಿಸ್ತುಬದ್ಧವಾಗಿ ಮತ್ತು ಯಶಸ್ವಿಯಾಗಿ ನಡೆಸಲು ಬೇಕಾದ ಅಮೂಲ್ಯ ಪಾಠಗಳನ್ನು ಸಹ ಒಳಗೊಂಡಿದೆ.

**ಸಾಮಾನ್ಯ ಜನರಿಗೆ ಅನ್ವಯವಾಗುವ ಕೌಟಿಲ್ಯನ ಅರ್ಥಶಾಸ್ತ್ರದ ಪ್ರಮುಖ ಅಂಶಗಳು ಹೀಗಿವೆ.**

★ ಸಂಪತ್ತನ್ನು ಸದಾ ಸಂರಕ್ಷಿಸುವುದು ಸೇವಕರ ಕರ್ತವ್ಯವಾದರೂ, ಬುದ್ಧಿವಂತನು ತನ್ನ ಸಾಮರ್ಥ್ಯವನ್ನು ಮೀರಿ ವೆಚ್ಚ (ಖರ್ಚು) ಮಾಡುವುದಿಲ್ಲ.

★ ಅರ್ಥಮೂಲಂ ಹಿ ಕಾರ್ಯಂ ಅಂದರೆ ಎಲ್ಲ ಕಾರ್ಯಗಳಿಗೂ ಹಣವೇ ಆಧಾರ. ಇದು ಅರ್ಥಶಾಸ್ತ್ರದ ಮೂಲ ಮಂತ್ರವಿದ್ದಂತೆ.

★ ಸಾಮಾನ್ಯ ವ್ಯಕ್ತಿಯೊಬ್ಬ ತನ್ನ ಆದಾಯದ ಕಾಲು ಭಾಗವನ್ನು (25%) ಆಪತ್ಕಾಲಕ್ಕಾಗಿ ಉಳಿಸಲೇಬೇಕು ಎಂದು ಕೌಟಿಲ್ಯ ಒತ್ತಿ ಹೇಳುತ್ತಾನೆ.

★ ಸಾಲ ಮಾಡುವುದು ವ್ಯಕ್ತಿಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ. ಶತ್ರು ಮತ್ತು ರೋಗದಂತೆ ಸಾಲವನ್ನೂ ಸಹ ಮೂಲದಿಂದಲೇ ನಾಶಪಡಿಸಬೇಕು.

★ ವಿದ್ಯೆಯೇ ಅತ್ಯುತ್ತಮ ಸಂಪತ್ತು ಹಾಗೂ ಶಿಕ್ಷಣವು ವ್ಯಕ್ತಿಯಲ್ಲಿ ವಿನಯವನ್ನು ಬೆಳೆಸಬೇಕು.

★ ಸೋಮಾರಿತನವೇ ಮನುಷ್ಯನ ಅತಿದೊಡ್ಡ ಶತ್ರು.

★ ಒಬ್ಬ ಸಾಮಾನ್ಯ ವ್ಯಕ್ತಿ ತಾನು ಯಾರನ್ನು ನಂಬುತ್ತಿದ್ದಾನೆ ಎಂಬುದರ ಬಗ್ಗೆ ಯಾವಾಗಲೂ ಜಾಗರೂಕನಾಗಿರಬೇಕು.

★ ಒಬ್ಬ ಪ್ರಜೆ ಯಾವಾಗಲೂ ರಾಷ್ಟ್ರದ ಕಾನೂನನ್ನು ಗೌರವಿಸಿ, ಅನುಸರಿಸಬೇಕು.

ದೇಶದ ಪ್ರಗತಿ ವೇಗ ಪಡೆದುಕೊಳ್ಳುತ್ತಿದ್ದರೂ, ಪ್ರಜೆಯ ಜೀವನದಲ್ಲಿ ನಿಜವಾದ ಸಂತೃಪ್ತಿ ಮತ್ತು ಸಮಾಧಾನ ನೆಲೆಸಿದೆಯೇ ಎಂಬ ಪ್ರಶ್ನೆ ಇನ್ನೂ ಪ್ರಸ್ತುತವೇ. ಅಗತ್ಯ ಮತ್ತು ಆಸೆಯ ನಡುವಿನ ರೇಖೆ ಮಸುಕಾಗುತ್ತಿರುವ ಈ ಕಾಲದಲ್ಲಿ, ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ ಎಂಬ ಸತ್ಯ ಅರಿತಿದ್ದರೂ, ಭವಿಷ್ಯದ ಭಯದಿಂದ ಮಾನವನು ಹಣಗಳಿಕೆಯ ಹಿಂದೆ ಅಂಧನಂತೆ ಓಡುತ್ತಾ, ಅತಿರೇಕದ ಸಂಗ್ರಹಣೆಗೆ ತೊಡಗಿಕೊಂಡು ನೆಮ್ಮದಿಯಿಂದ ದೂರ ಸರಿಯುತ್ತಿದ್ದಾನೆ.

ಒಟ್ಟಾರೆ, ಬಜೆಟ್ ಎನ್ನುವುದು ಕೇವಲ ಸರ್ಕಾರದ ಘೋಷಣೆ ಅಥವಾ ಸಂಖ್ಯೆಗಳ ಲೆಕ್ಕವಲ್ಲ. ದೇಶದ ಬಜೆಟ್ ಕೊರತೆಯದ್ದಾಗಿರಬಹುದು; ಆದರೆ ನಮ್ಮ ಜೀವನದ ಬಜೆಟ್ ಮೌಲ್ಯಯುತವಾಗಿರಬೇಕು. ಭಗವದ್ಗೀತೆಯ ನಿಷ್ಕಾಮ ಕರ್ಮ ಮತ್ತು ಕೌಟಿಲ್ಯನ ಅರ್ಥಶಾಸ್ತ್ರದ ಶಿಸ್ತುಇವೆರಡನ್ನೂ ದೈನಂದಿನ ಆಯವ್ಯಯಕ್ಕೆ ಅಳವಡಿಸಿಕೊಂಡಾಗ ಮಾತ್ರ ಹಣಕಾಸಿನ ಭದ್ರತೆಯ ಜೊತೆಗೆ ಮಾನಸಿಕ ಶಾಂತಿಯೂ ಸಾಧ್ಯ.

**- ಅಮರನಾಥ್ ದೇವಧರ್,** ಬೆಂಗಳೂರು

---

## ಸವಿ ಬದುಕಿಗೆ

ಈ ಉಪನಿಷತ್ತು ಎಲ್ಲರ ಬಾಳಿಗೆ ಬೆಳಕು ನೀಡುವ ಸಂದೇಶವಾಹಕವಾಗಿದೆ.

ಅರ್ಥಾತುರಾಣಾಂ ನ ಗುರುಂ ನ ಬಂಧುಃ
ಕಾಮಾತುರಾಣಾಂ ನಭಯಂ ನ ಲಜ್ಜಾ
ವಿದ್ಯಾತುರಾಣಾಂ ನ ಸುಖಂ ನ ನಿದ್ರಾ
ಕ್ಷುಧಾತುರಾಣಾಂ ನ ರುಚಿ: ನ ಪಕ್ವಂ

ಅರ್ಥ ಎಂದರೆ ಹಣ ಅಥವಾ ಸಂಪತ್ತು. ಸಂಪತ್ತಿನ ಅಧಿದೇವತೆಯಾದ ಲಕ್ಷ್ಮೀದೇವಿಯನ್ನು ದಿನ ನಿತ್ಯ ಸಂಪತ್ತು ಕೊಡು ಎಂದು ಪ್ರಾರ್ಥಿಸದವರು ಯಾರೂ ಇರಲಾರರು. ಜೀವನದ ನಿರ್ವಹಣೆಯಲ್ಲಿ ಹಣ ಕಾಸು ಬೇಕೇ ಬೇಕು. ಆದರೆ ಇರಬೇಕಾದ ಅಥವಾ ನಾವು ಬಯಸುವ ಸಂಪತ್ತಿಗೂ ಮಿತಿ ಬೇಕು. ಅತಿಯಾದರೆ ಅಮೃತವೂ ವಿಷವಾಗಿ ನಮ್ಮನ್ನು ಬಲಿತೆಗೆದುಕೊಳ್ಳುತ್ತದೆಂಬ ಹಿರಿಯರ ನುಡಿಯಿದೆ. ಸಂಪತ್ತು ಕೂಡಾ ಅತಿಯಾಗಿ ನಮ್ಮೊಡನೆ ಸೇರಿದರೆ ನಮ್ಮ ಬದುಕಿನ ನೈತಿಕತೆಗೆ ಸಂಚಕಾರ ತರಬಹುದು. ನಮ್ಮ ಭಾವನೆಗಳು ವಿಕೃತವಾಗಬಹುದು. ಮತ್ತೂ ಬೇಕೆಂಬ ಅತಿಯಾಸೆಗೆ ಬಲಿಯಾಗಿ ನಮ್ಮತನವನ್ನು ಕಳೆದುಕೊಳ್ಳುವ ಸಾಧ್ಯತೆಯೂ ಇದೆ. ವಚನ ಭ್ರಷ್ಟತೆ ಮತ್ತು ನೀತಿ ಭ್ರಷ್ಟತೆಗೆ ನಾವು ವಶರಾಗಬಹುದು.

ಅರ್ಥಾರ್ಥಿ ಅಥವಾ ಹಣದ ಅತ್ಯಾಕಾಂಕ್ಷಿಯು ಜಿಪುಣನಾಗುತ್ತಾನೆ. ಅವನು ಸಂಪತ್ತು ಗಳಿಸಲು ಗುರುಗಳು ಬಂಧು- ಮಿತ್ರರೆಂಬ ಗೌರವ ಅಥವಾ ಸಂಬಂಧಗಳನ್ನು ಗೌರವಿಸದೆ ಅವರಿಗೂ ಮೋಸದ ಕುಕಾರ್ಯಗಳನ್ನು ಮಾಡುತ್ತಾನೆ. ಸಂಪತ್ತಿನ ಮುಂದೆ ಆತನಿಗೆ ಸಂಬಂಧಗಳು ಗೌಣವಾಗುತ್ತವೆ. ಇದರಿಂದಾಗಿ ಅವನು ಅವರನ್ನು ಕಳೆದುಕೊಳ್ಳುವ ಭಯವೇ ಅಧಿಕವಾಗಿರುತ್ತದೆ.

ಕಾಮ ಎಂದರೆ ಬಯಕೆ ಅಥವಾ ಅಪೇಕ್ಷೆ. ಉತ್ತಮವಾದುದು ಬೇಕು ಅವುಗಳನ್ನು ಪಡೆಯಲು ಪ್ರಯತ್ನಿಸುವುದು ತಪ್ಪಲ್ಲ. ಕಾಮನೆಗಳು ಬಲವಾದಾಗ ಅರ್ಥಗಳಿಕೆಯಲ್ಲಿ ಅನುಸರಿಸುವ ಎಲ್ಲ ಅನಿಷ್ಟಗಳನ್ನೂ ಅನುಸರಿಸುತ್ತಾನೆ. ಕಾಮನೆಗಳನ್ನು ಈಡೇರಿಸುವ ಚಪಲದಲ್ಲಿ ಅವನು ಮಾನ, ಮರ್ಯಾದೆ, ನಾಚಿಕೆಗಳಂತಹ ಮೌಲ್ಯಗಳಿಗೆ ಬೆಲೆ ನೀಡುವುದಿಲ್ಲ. ಅವನಿಗೆ ಸರಿಯಾಗಿ ನಿದ್ದೆಯನ್ನಾಗಲೀ ವಿರಾಮವನ್ನಾಗಲೀ ಅನುಭವಿಸಲಾಗದು. ಇದರಿಂದಾಗಿ ಆರೋಗ್ಯವೂ ಹಾಳಾಗುತ್ತದೆ. ಇವರು ಮಾಡುವ ತಪ್ಪುಗಳು ಮಿತಿ ಮೀರುತ್ತವೆ. ಬದುಕು ಕಳಂಕಮಯವಾಗುತ್ತದೆ.

ಹಾಗೆಯೇ ವಿದ್ಯಾತುರತೆಯೂ ಇರುವವರಿದ್ದಾರೆ. ವಿದ್ಯೆಯು ಜ್ಞಾನಕ್ಕೆ ಹೇತುವಾದುದು. ಸರಿಯಾಗಿ ಕಲಿತು ಪ್ರಾಜ್ಞನಾಗಲು ಬಯಸುವವನು ಆಲಸಿಯಾಗಿರುವುದಿಲ್ಲ. ಹೆಚ್ಚು ವಿಶ್ರಾಂತಿ ಮತ್ತು ನಿದ್ದೆ ಇದ್ದವರಿಗೆ ಜ್ಞಾನ ಲಭಿಸದು. ಬದುಕಿನ ಉತ್ಕರ್ಷಕ್ಕೆ ಜ್ಞಾನ ಅಗತ್ಯ. ವಿದ್ಯಾತುರನು ಸುಖ ಮತ್ತು ಆರಾಮಗಳನ್ನು ಬಯಸುವಂತಿಲ್ಲ ಮತ್ತು ಅನುಭವಿಸುವಂತಿಲ್ಲ. ಆದರೆ ಪಡುವ ಪಾಡಿನಿಂದ ಮುಂದಿನ ಬದುಕು ಸವಿಯಾಗುತ್ತದೆ.

ಕ್ಷುಧಾ ಎಂದರೆ ಹಸಿವು. ಬಹಳ ಹಸಿದವನು ಗಬ ಗಬನೆ ತಿನ್ನುವುದನ್ನು ಗಮನಿಸಿದ್ದೇವೆ. ಹಸಿದವನು ಆಹಾರವು ಬೆಂದಿದೆಯೋ ಇಲ್ಲವೋ, ರುಚಿಯಾಗಿದೆಯೋ ಇಲ್ಲವೋ ಮುಂತಾದುವಗಳನ್ನು ಗಮನಿಸುವುದಿಲ್ಲ. ಅಂತಹವರು ಆಹಾರದ ಬಗ್ಗೆ ಕೊರತೆಗಳನ್ನು ಹೇಳುವುದೇ ಇಲ್ಲ. ಹೊಟ್ಟೆತುಂಬಿದವನಿಗೆ ಲೋಕವೇ ಕೊರತೆಯಿಂದ ತುಂಬಿದೆ ಎಂಬ ಭಾವವಿರುತ್ತದೆ. ಹಸಿವುಳ್ಳವನು ಎಲ್ಲದಕ್ಕೂ ಎಲ್ಲರಿಗೂ ಹೊಂದಿಕೊಂಡು ಇರುವುದರಲ್ಲಿಯೇ ತೃಪ್ತನಾಗಿರುತ್ತಾನೆ. ಆದುದರಿಂದ ಉಪನಿಷತ್ತನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅಳವಡಿಸಿಕೊಂಡಾಗ ನಮ್ಮ ಜೀವನ ರಸಭರಿತವಾಗುತ್ತದೆ.

**- ರಮೇಶ ಎಂ. ಬಾಯಾರು,** ಬಂಟ್ವಾಳ



---

# ಸಾವಿರದ ಮರಗಳ ಮಾತೆ ದೇವಕಿ ಅಮ್ಮ!


ಈ ವರ್ಷ ಗಣರಾಜ್ಯೋತ್ಸವದ ಹಿಂದಿನ ದಿನ, 92 ವರ್ಷದ ಕೇರಳದ ಕೊಲ್ಲಕ್ಕಯಿಲ್ ದೇವಕಿ ಅಮ್ಮನಿಗೆ ಕೇಂದ್ರ ಸರ್ಕಾರ ಪದ್ಮಶ್ರೀ ಪುರಸ್ಕಾರ ಘೋಷಿಸಿತು. ಇದು ಆಕೆಯ ದೀರ್ಘಕಾಲದ ಪರಿಸರ ಸೇವೆಗೆ ಸಲ್ಲಿಸಿದ ಗೌರವ. ನಮ್ಮ ರಾಜ್ಯದವರೇ ಆದ ಸಾಲುಮರದ ತಿಮ್ಮಕ್ಕ, ವೃಕ್ಷ ಮಾತೆ ತುಳಸೀ ಗೌಡ ಇವರ ಸಾಲಿಗೆ ದೇವಕಿ ಅಮ್ಮನವರೂ ಸೇರಿದರು. ಪ್ರಶಸ್ತಿ ಆಯ್ಕೆಯಲ್ಲಿ ಏನೇ ರಾಜಕೀಯ ಇರಲಿ ಇತ್ತೀಚೆಗೆ ಕನಿಷ್ಟ 50% ಪದ್ಮ ಪ್ರಶಸ್ತಿಗಳಾದರೂ ಎಲೆಮರೆಯ ಕಾಯಿಗಳಂತಿರುವ ಅರ್ಹ ಸಾಧಕರಿಗೆ ಸಲ್ಲುತ್ತಿದೆ. ಈ ಸಾಲಿಗೇ ಸೇರಿದ್ದಾರೆ ದೇವಕಿ ಅಮ್ಮ.

ಒಂದು ಕಾಲದಲ್ಲಿ ಇಂಗ್ಲಿಷ್ ಶಿಕ್ಷಕರಾಗಿದ್ದ ಗೋಪಾಲಕೃಷ್ಣ ಪಿಳ್ಳೆಯವರನ್ನು ಮದುವೆಯಾದ ದೇವಕಿ, ಶಾಲೆಯಲ್ಲಿ ಗಂಡ ಪಾಠ ಮಾಡುತ್ತಿದ್ದರೂ ಮನೆಯ ಹಿತ್ತಲು-ಮನೆಯಲ್ಲಿ ಕೃಷಿಯ ಪಾಠಗಳನ್ನು ಕಲಿತಳು. ತನ್ನ ಅತ್ತೆ ಭತ್ತದ ಗದ್ದೆಗಳಲ್ಲಿ ಕೆಲಸ ಮಾಡುವುದನ್ನು ಕಂಡು, ಪರಿಸರದ ಮಹತ್ವವನ್ನು ಹೃದಯದಲ್ಲಿ ಮುದ್ರಿಸಿಕೊಂಡಳು. ತನ್ನ ಅತ್ತೆಯಿಂದ ಅಮೂಲ್ಯವಾದ ಕೃಷಿ ಕಾರ್ಯವನ್ನು ಕಲಿತುಕೊಂಡರು. ಆದರೆ ಜೀವನ ಒಂದು ದಿನ ಆಕೆಯನ್ನು ಘನಘೋರ ಪರೀಕ್ಷೆಗೆ ಒಡ್ಡಿತು. ಕಾರು ಅಪಘಾತದಲ್ಲಿ ದೇವಕಿಯ ಕಾಲಿಗೆ ಗಂಭೀರ ಗಾಯವಾಯಿತು. ಈ ಗಾಯದ ಕಾರಣ ಆಕೆ ಮೂರು ವರ್ಷಗಳ ಕಾಲ ಹಾಸಿಗೆ ಹಿಡಿಯಬೇಕಾಯಿತು.



ಆ ಸಮಯದಲ್ಲಿ ವಿಧಿಯನ್ನು ಹಳಿಯುವ ಬದಲು, ದೇವಕಿ ಅಮ್ಮ ಧೈರ್ಯದ ಹೆಜ್ಜೆ ಇಟ್ಟರು. ಗಂಡ ಶಾಲೆಗೆ ಹೋದಾಗ, ಸಮಯ ಕಳೆಯಲು ಮನೆಯ ಹಿತ್ತಲಲ್ಲಿ ಒಂದು ಸಸಿಯನ್ನು ನೆಟ್ಟರು. ಅದು ಬೆಳೆಯುವುದನ್ನು ನೋಡಿ ಸಂತಸಗೊಂಡು ಇನ್ನಷ್ಟು ಸಸಿಗಳನ್ನು ನೆಡತೊಡಗಿದರು. ಅತ್ತೆಯ ನಿಧನದ ನಂತರ ಅವರ ಐದು ಎಕರೆ ಭತ್ತದ ಭೂಮಿ ಅನಾಥವಾಯಿತು. ನಾಟಿ ಮಾಡುವುದು ಅಸಾಧ್ಯವಾದರೂ, ಆ ಭೂಮಿಯಲ್ಲೇ ಸಸಿಗಳನ್ನು ನೆಡುವುದನ್ನು ಮುಂದುವರಿಸಿದರು.

ಕಾಲ ಸರಿದಂತೆ ಕಾಲು ಸುಧಾರಿಸಿತು. ಆದರೆ ದೇವಕಿ ಅಮ್ಮನ ಮನಸ್ಸು ಮಾತ್ರ ನಿಲ್ಲಲಿಲ್ಲ. ಒಂದೊಂದೇ ಸಸಿಯನ್ನು ನೆಡುತ್ತಾ, ಕೊನೆಗೆ ಇಡೀ ಐದು ಎಕರೆಯನ್ನು ಹಸಿರು ಸಸಿಗಳಿಂದ ತುಂಬಿದರು. 1980ರ ದಶಕದ ಆರಂಭದಲ್ಲಿ ಆರಂಭವಾದ ಈ ಪ್ರಯತ್ನದ ಫಲವಾಗಿ ಇಂದು ಸುಮಾರು 3,000ಕ್ಕೂ ಹೆಚ್ಚು ಮರಗಳು, ಔಷಧೀಯ ಸಸ್ಯಗಳು, ನೈಸರ್ಗಿಕವಾಗಿ ಹುಟ್ಟಿಕೊಂಡ ಕೆರೆಗಳು ತುಂಬಿವೆ. ಆ ಭೂಮಿ ಭತ್ತದ ಗದ್ದೆಯಿಂದ ತಪೋವನ ಎಂಬ ಹೆಸರಿನ ಸ್ವಾಭಾವಿಕ ಕಾಡಾಗಿ ಪರಿವರ್ತನೆಯಾಗಿದೆ.



ಈ ತಪೋವನದಲ್ಲಿ ಎರಡು ಕೆರೆಗಳು ಸಹಜವಾಗಿ ರೂಪುಗೊಂಡಿವೆ. ನೂರಾರು ಪಕ್ಷಿಗಳು, ಪ್ರಾಣಿಗಳು ಆಶ್ರಯ ಪಡೆದಿವೆ. ವಿದ್ಯಾರ್ಥಿಗಳು, ಸಂಶೋಧಕರು, ಪರಿಸರ ತಜ್ಞರು ಇಲ್ಲಿಗೆ ಬಂದು ಅಧ್ಯಯನ ನಡೆಸುತ್ತಾರೆ. ಆಲಪ್ಪುಳ ಜಿಲ್ಲೆಯ ಕೇರಳದ ಭತ್ತದ ಕಣಜ ಎನಿಸಿಕೊಂಡ ಪ್ರದೇಶದಲ್ಲಿ, ಕೃಷಿ ಬಿಟ್ಟು 46 ವರ್ಷಗಳ ಕಾಲ ಕೈಯಿಂದಲೇ ಕಾಡು ಬೆಳೆಸಿದ್ದು ಅಪರೂಪದ ಸಾಧನೆ.

ಮೊದಲಿಗೆ ಪತಿ ಗೋಪಾಲಕೃಷ್ಣ ಪಿಳ್ಳೆ ಅವರು ಪ್ರತಿದಿನ ಸಸಿಗಳನ್ನು ತಂದುಕೊಟ್ಟರು. ತಮ್ಮ ಹಿರಿಯರ ಗಿಡದ ಬಗ್ಗೆ ಇರುವ ಪ್ರೀತಿ ಕಂಡು ಮಕ್ಕಳು, ಮೊಮ್ಮಕ್ಕಳು ಪ್ರೇರಿತರಾದರು. ಇವರ ಪುತ್ರಿ ಪ್ರೊ. ಡಿ. ತಂಗಮಣಿ ಅವರು ತಿರುವನಂತಪುರಂ ಎಂಜಿನಿಯರಿಂಗ್ ಕಾಲೇಜಿನ ಪರಿಸರ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ದೇವಕಿ ಅಮ್ಮನ ಶ್ರಮದ ಕುರಿತು ಹಲವಾರು ಸಾಕ್ಷ್ಯ ಚಿತ್ರಗಳೂ ತಯಾರಾಗಿವೆ.

ನಾಲ್ಕು ಗೋಡೆಗಳ ನಡುವೆ ಕೂತು ನಡೆಸುವ ಹವಾಮಾನ ಬದಲಾವಣೆಯ ಚರ್ಚೆಗಳ ಮಧ್ಯೆ, ದೇವಕಿ ಅಮ್ಮನ ಹಸಿರು ಗಿಡಗಳ ನಡುವೆ ನಡೆಸುವ ಪ್ರಾಯೋಗಿಕ ಕೆಲಸ ದೊಡ್ಡ ಸಂದೇಶ ನೀಡುತ್ತದೆ. ಚಿಪ್ಕೋ ಚಳವಳಿಯ ಭಚ್ನೆ ದೇವಿ, ಸಾಲುಮರದ ತಿಮ್ಮಕ್ಕ ಅವರಂತಹ ಪರಿಸರ ಹೋರಾಟಗಾರ್ತಿಯರ ಸಾಲಿಗೆ ದೇವಕಿ ಅಮ್ಮ ಸೇರುತ್ತಾರೆ. ಒಬ್ಬರೇ ಸಾವಿರಾರು ಮರಗಳನ್ನು ಬೆಳೆಸಿ, ವನಮುತ್ತಾಶಿ ಎನಿಸಿಕೊಂಡ ಈ ಮಹಿಳೆಯ ಸಾಧನೆ ಕಿರಿಯರಿಗೆ ಅನಂತ ಸ್ಫೂರ್ತಿಯಾಗಬೇಕಾಗಿದೆ. ಇಂತಹ ಸರಳ ಆದರೆ ಅಚಲ ನಿಷ್ಠೆಯಿಂದ ಭೂಮಿಯನ್ನು ಹಸಿರು ಮಾಡಿದ ದೇವಕಿ ಅಮ್ಮನವರಿಗೆ ಸಿಕ್ಕ ಪದ್ಮಶ್ರೀ ಪ್ರಶಸ್ತಿ ಅರ್ಹ ವ್ಯಕ್ತಿಗೆ ಸಿಕ್ಕ ಸರಿಯಾದ ಗೌರವ.

### ದೇವಕಿ ಅಮ್ಮನವರ ಪ್ರಶಸ್ತಿಗಳು

- ದೇವಕಿ ಅಮ್ಮನವರ ಈ ನಿಸ್ವಾರ್ಥ ಸೇವೆಗೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ.
- ಕೇಂದ್ರ ಸರ್ಕಾರದ ಎರಡು ಪ್ರಶಸ್ತಿಗಳು ಬಂದಿವೆ- ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ ಮತ್ತು ನಾರಿ ಶಕ್ತಿ ಪುರಸ್ಕಾರ.
- ಈ ವರ್ಷ ಅವರಿಗೆ ಭಾರತದ ಅಧ್ಯಕ್ಷ ರಾಮ್ ನಾಥ್ ಕೋವಿಂದ್ ಅವರು ನಾರಿ ಶಕ್ತಿ ಪುರಸ್ಕಾರ ಪ್ರಧಾನ ಮಾಡಿದರು.
- ಮಾತ್ರವಲ್ಲದೆ, ಅವರು ರಾಜ್ಯ ಸರ್ಕಾರವು ವನಮಿತ್ರ ಪ್ರಶಸ್ತಿ, ಹರಿ ವ್ಯಕ್ತಿ ಪುರಸ್ಕಾರ ಮತ್ತು ಸ್ವದೇಶಿ ವಿಜ್ಞಾನದ ಭೂಮಿತ್ರ ಪುರಸ್ಕಾರದಂತಹ ಇತರ ಪ್ರಶಸ್ತಿಗಳನ್ನು ಸಹ ಪಡೆದಿದ್ದಾರೆ.

ಪರಿಸರದ ರಕ್ಷಣೆ ಅವರ ಗುರಿಯಾಗಿದ್ದರಿಂದ, ದೇವಕಿ ಅಮ್ಮ ಸಸ್ಯಗಳು ಮತ್ತು ಮರಗಳನ್ನು ಬೆಳೆಸಲು ಮತ್ತು ಉಳಿಸಿಕೊಳ್ಳಲು ಹಸಿರು ಸಾವಯವ ಗೊಬ್ಬರವನ್ನು ಮಾತ್ರ ಬಳಸುತ್ತಾರೆ. ತೇಗ, ಮಹಾಗೋನಿ, ಹುಣಸೆಹಣ್ಣು, ಮಾವು, ಪೈನ್, ಬಿದಿರು ಮುಂತಾದ 3.000 ಕ್ಕೂ ಹೆಚ್ಚು ಮರಗಳು ಈ ಕಾಡಿನಲ್ಲಿವೆ.

---

# ಎಚ್ಚೆತ್ತುಕೊಳ್ಳಲಿ ರಾಜ್ಯ ಸರಕಾರ

ಅಕ್ರಮವಾಗಿ ಬಂಧನದಲ್ಲಿರಿಸಿರುವ ತಮ್ಮನ್ನು ಬಿಡುಗಡೆ ಮಾಡಲು ನಿರ್ದೇಶಿಸಬೇಕೆಂದು ಕೋರಿ, ಸದ್ಯ ಬೆಂಗಳೂರಿನಲ್ಲಿರುವ ನೈಜೀರಿಯಾದ ಪ್ರಜೆಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಬೆಂಗಳೂರಲ್ಲೇಕೆ ಅಕ್ರಮ ವಿದೇಶಿಗರು ಠಿಕಾಣಿ ಹೂಡುತ್ತಿದ್ದಾರೆ? ಎಂಬ ಪ್ರಶ್ನೆ ಎತ್ತಿದೆ. ಆಫ್ರಿಕನ್ ರಾಷ್ಟ್ರೀಯರು ಭಾರತದ ನೆಲದಲ್ಲಿ ಮಾದಕವಸ್ತು ಕಳ್ಳಸಾಗಣೆ ಸೇರಿದಂತೆ ಹಲವು ಅಪರಾಧ ಕೃತ್ಯಗಳಲ್ಲಿ ತೊಡಗಿರುವುದು ಕಂಡುಬಂದಿದೆ. ಹೀಗಿರುವಾಗ ದೇಶದ ಸಿಲಿಕಾನ್ ವ್ಯಾಲಿ ಎಂದೇ ಪರಿಗಣಿತವಾದ ಬೆಂಗಳೂರಿನಲ್ಲಿ ಕಾನೂನುಬಾಹಿರವಾಗಿ ವಿದೇಶಿಯರು ನೆಲೆಸಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ. ಆ ನಿಟ್ಟಿನಲ್ಲಿ ಹೈಕೋರ್ಟ್ ನ್ಯಾ. ಎಂ.ನಾಗಪ್ರಸನ್ನ ಅವರು ಎತ್ತಿರುವ ಪ್ರಶ್ನೆ ಸೂಕ್ತವಾಗಿದೆ.

ಅಕ್ರಮವಾಗಿ ನೆಲೆಸಿರುವ ವಿದೇಶಿಯರಿಂದ ದೇಶದ ಭದ್ರತೆಗೆ ಅಪಾಯವಿದೆ ಎಂಬ ನ್ಯಾಯಾಲಯದ ಕಳವಳ ಸರಿಯಾಗಿದೆ. ಬೆಂಗಳೂರು ಭಾರತದ ಪಾಲಿಗೆ ಜಗತ್ತಿನ ಹೆಬ್ಬಾಗಿಲು ಎಂಬಂತೆ ಬೆಳೆಯುತ್ತಿದೆ. ಹಾಗಾಗಿ ದೇಶ ವಿದೇಶಗಳ ಪ್ರಜೆಗಳು ಬೆಂಗಳೂರಿನ ಜತೆ ವ್ಯಾಪಾರ, ವೃತ್ತಿ ಇಲ್ಲವೇ ಪ್ರವಾಸಿ ಸಂಬಂಧ ವ್ಯವಹಾರ ಹೊಂದಿರುತ್ತಾರೆ. ಇದು ತಪ್ಪಲ್ಲ. ಆದರೆ ಹೀಗೆ ಬರುವ ಪ್ರವಾಸಿಗರು ಅಧಿಕೃತ ವೀಸಾ ಇಲ್ಲದೇ ಇಲ್ಲಿಯೇ ಠಿಕಾಣಿ ಹೂಡುತ್ತಿರುವುದು ನಿಜಕ್ಕೂ ಆತಂಕಕಾರಿ.


ನಮ್ಮಲ್ಲಿಗೆ ಬರುವ ವಿದೇಶಿ ಪ್ರಜೆಗಳು ವಿದೇಶಿಯರ ಪ್ರಾದೇಶಿಕ ನೋಂದಣಿ ಅಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು. ಆ ಮೂಲಕ ವಿದೇಶಿ ಪ್ರಜೆಗಳ ಮೇಲೆ ರಾಜ್ಯ ಸರಕಾರ ನಿಗಾ ಇರಿಸಬೇಕು. ನೀತಿ ನಿಯಮ ಹೀಗಿದ್ದರೂ, ಇದ್ಯಾವುದರ ಭಯವಿಲ್ಲದೇ ವಿದೇಶಿ ಪ್ರಜೆಗಳು ಇಲ್ಲಿಯೇ ಉಳಿದಿರುವುದು ದಿಗ್ಭ್ರಮೆಯ ಸಂಗತಿ! ಇದನ್ನು ತನ್ನ ವಿಚಾರಣೆ ವೇಳೆ ಗುರುತಿಸಿರುವ ಹೈಕೋರ್ಟ್, ಬೆಂಗಳೂರಿನಲ್ಲಿ ಉಳಿದುಕೊಂಡಿರುವ ವಿದೇಶಿ ಪ್ರಜೆಗಳನ್ನು ನಿಭಾಯಿಸುವ ವಿಷಯದಲ್ಲಿ ರಾಜ್ಯದ ಕಡೆಯಿಂದ ಕರ್ತವ್ಯ ಲೋಪವಾಗಿದೆ. ಇಂತಹ ಪ್ರಕರಣಗಳಲ್ಲಿ ರಾಜ್ಯ ಸರಕಾರ ಮೌನ ಪ್ರದರ್ಶಿಸುತ್ತಿರುವುದು ಹಾಗೂ ಮೂಕಪ್ರೇಕ್ಷಕನಾಗಿರುವುದು ಆತಂಕದ ಸಂಗತಿ, ಎನ್ನುವ ಮೂಲಕ ಚಾಟಿ ಬೀಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನೈಜೀರಿಯಾದ ಪ್ರಜೆಗಳು ಭಾರತಕ್ಕೆ 2015ರಲ್ಲಿ ವ್ಯಾಪಾರಿ ವೀಸಾ ಪಡೆದು ಬಂದಿದ್ದಾರೆ. ಬಳಿಕ ಅದರ ಅವಧಿ ಮುಗಿದರೂ ವಿಭಿನ್ನ ವೀಸಾಗಳಲ್ಲಿ ಇಲ್ಲಿಯೇ ಉಳಿದು ಮಾದಕ ದ್ರವ್ಯಗಳ ವ್ಯವಹಾರ ಆರಂಭಿಸಿದ್ದಾರೆ. ವಿದೇಶಗಳಿಂದಲೇ ಭಾರತಕ್ಕೆ ಮಾದಕ ವಸ್ತುಗಳು ಸರಬರಾಜು ಆಗುತ್ತಿದ್ದು, ಅಕ್ರಮವಾಗಿ ನೆಲೆಸಿರುವ ಇಂಥಾ ವಿದೇಶಿ ಪ್ರಜೆಗಳೇ ಈ ಸಾಗಣೆಯ ಏಜೆಂಟ್‌ಗಳು ಎಂಬುದಕ್ಕೆ ಈ ಪ್ರಕರಣ ದೊಡ್ಡ ಪುರಾವೆ. ಹಾಗಾಗಿ, ಅಕ್ರಮವಾಗಿ ಇಲ್ಲಿಯೇ ಠಿಕಾಣಿ ಹೂಡಿರುವ ವಿದೇಶಿ ಪ್ರಜೆಗಳನ್ನು ನಿಯಂತ್ರಿಸದಿದ್ದರೆ ಪರೋಕ್ಷವಾಗಿ ಮಾದಕ ವಸ್ತುಗಳ ಸಾಗಣೆಗೆ ಅನುಮತಿ ಕೊಟ್ಟಂತೆ, ಸರಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು.

ರಾಷ್ಟ್ರೀಯ ಭದ್ರತೆ ವಿಷಯದಲ್ಲಿ ಯಾವುದೇ ಸರಕಾರ ರಾಜಿ ಮಾಡಿಕೊಳ್ಳಬಾರದು. ಇಂಥವುಗಳನ್ನೆಲ್ಲಾ ಮತ, ರಾಜಕೀಯದ ನೆಲೆಯಲ್ಲಿ ನಿರ್ವಹಿಸಿದರೆ, ಬೆಂಕಿಯನ್ನು ಸೆರಗಿನಲ್ಲಿ ಕಟ್ಟಿಕೊಂಡಂತೆ ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಯ ಕಾರ್ಯನಿರ್ವಹಣೆ, ಅಕ್ರಮವಾಗಿ ನೆಲೆಸಿರುವ ವಿದೇಶಿಯರ ವಿರುದ್ಧ, ತೆಗೆದುಕೊಳ್ಳುವ ಕೆಲಸವನ್ನು ರಾಜ್ಯ ಸರಕಾರ ನಿಷ್ಪಕ್ಷವಾಗಿ ಮಾಡಬೇಕು.



---



## ನಗೆ ಹನಿಗಳು

### ಹೆಸರು ಹೇಳು

**ಉಪಾಧ್ಯಾಯರು:** ಗುಂಡ, ರೈಟ್ ಸಹೋದರರು ವಿಮಾನ ಕಂಡುಹಿಡಿಯುವುದಕ್ಕೆ ಮುಂಚೆ ಹಲವಾರು ಮಂದಿ ವಿಮಾನವನ್ನು ಕಂಡುಹಿಡಿಯಲು ಪ್ರಯತ್ನ ಪಟ್ಟಿದ್ದರು. ಅವರ ಹೆಸರು ಹೇಳು.

**ಗುಂಡ:** ರಾಂಗ್ ಸಹೋದರರು, ಸರ್.

★★★★★★★★★★★

### ಯಾರ ಹೆಸರಿಗೆ?

**ಪೂಜಾರಿ:** ಮಂಗಳಾರತಿ ಯಾರ ಹೆಸರಿಗೆ ಮಾಡಲಿ?

**ಗುಂಡ:** ನನ್ನ ಹೆಂಡತಿಯ ಹೆಸರಿಗೆ ಮಾಡಿ.

**ಪೂಜಾರಿ:** ಯಾಕೆ ನಿಮ್ಮ ಹೆಸರಿಗೆ ಬೇಡವಾ, ಸರ್?

**ಗುಂಡ:** ಬೇಡ, ಈಗಾಗಲೇ ಅದು ಮನೆಯಲ್ಲಿ ಆಗಿದೆ.

---

# ಸಣ್ಣ ಕಥೆ. ದೊಡ್ಡ ಸಂದೇಶ

ಕೃಷ್ಣಂ ವಂದೇ ಜಗದ್ಗುರುಂ

ಮೃತ್ಯುವಿನಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದಾದ ಮೇಲೆ ನಾವು ಜಪ, ತಪ, ಹೋಮ, ಸತ್ಸಂಗ, ಪೂಜೆ ಇವುಗಳನ್ನೆಲ್ಲಾ ಮಾಡಿ ಯಾಕೆ ಕಷ್ಟ ಪಡಬೇಕು? ಮೋಜು, ಮಸ್ತಿ, ಮಜಾ ಮಾಡಿಕೊಃಡು ಬೇರೆಯವರಿಗೆ ಕಣ್ಣೀರು ತರಿಸುವವನಿಗೂ ಮರಣ ಇದೆ. ಹಾಗಾದರೆ ನಾವು ಮೋಜು ಮಸ್ತಿ ಮಜಾವನ್ನೇ ಯಾಕೆ ಮಾಡಬಾರದು?

ಇದು ರಣರಂಗದಲ್ಲಿ ಅರ್ಜುನನು ಶ್ರೀ ಕೃಷ್ಣ ಪರಮಾತ್ಮನಿಗೆ ಕೇಳಿದ ಪ್ರಶ್ನೆ. ಹಾಗಾದರೆ ಶ್ರೀಕೃಷ್ಣ ಪರಮಾತ್ಮನು ಏನೆಂದು ಉತ್ತರಿಸಿದನು ಓದೋಣ ಬನ್ನಿ.

ಹೇ ಪಾರ್ಥಾ ಕೇಳು.

ಬೆಕ್ಕು ಇಲಿಯನ್ನು ಹಿಡಿಯುವಾಗ ತನ್ನ ಹಲ್ಲುಗಳಿಂದ ಹಿಡಿದು ಹರಿದು ಕೊಂದು ತಿನ್ನುತ್ತದೆ. ಆದರೆ ಅದೇ ಬೆಕ್ಕು ಅದೇ ಹಲ್ಲುಗಳಿಂದ ತನ್ನ ಮರಿಗಳನ್ನು ಎತ್ತುತ್ತದೆ ವಿನಃ ಮರಿಗಳನ್ನು ಸಾಯಿಸುವುದಿಲ್ಲಾ. ತುಂಬಾ ನಾಜೂಕಾಗಿ ಮೆತ್ತಗೆ ಮರಿಗಳನ್ನು ಎತ್ತಿಕೊಂಡು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುತ್ತದೆ.

ಅದೇ ಹಲ್ಲುಗಳು. ಮುಖವೂ ಅದೇ ಆದರೆ ಪರಿಣಾಮ ಬೇರೆ ಬೇರೆ.

ಇಲ್ಲಿ ನೀನು ಬೆಕ್ಕಿನ ಹಲ್ಲುಗಳನ್ನು ಮನುಷ್ಯನ ಸಾವೆಂದು ತಿಳಿ.

ಮೃತ್ಯುರೂಪಿ ಹಲ್ಲುಗಳಿಂದ ಬೆಕ್ಕು ಇಲಿಯನ್ನು ಸಾಯಿಸುವುದೂ, ಮರಿಗಳನ್ನು ಎತ್ತಿಕೊಳ್ಳುವುದೂ ನಿಶ್ಚಿತವೇ. ಅದೇ ರೀತಿ ಮನುಷ್ಯರ ಶರೀರ ರೂಪಿ ಆತ್ಮಕ್ಕೆ ಮೃತ್ಯುರೂಪಿ ಹಲ್ಲುಗಳಿಂದ ಬರುವ ಏಟು (ಮರಣ) ಸತ್ಯವೂ ನಿಶ್ಚಿತವೂ ಆಗಿದೆ.



ನಾನು ಸತ್ಕರ್ಮ ನಿರತ ಹೋಮ ಹವನ ಜಪ ತಪಾದಿಗಳಲ್ಲಿ ತೊಡಗಿರುವವನ ಆತ್ಮವನ್ನು ನನ್ನ ಧಾಮಕ್ಕೆ ಕರೆಸಿಕೊಂಡರೆ ಪರರನ್ನು ಹಿಂಸಿಸಿ ಕಣ್ಣೀರು ತರಿಸಿ ಮೋಜು ಮಸ್ತಿ ಮಜಾಗಳಲ್ಲಿ ತೊಡಗಿರುವವನ ಆತ್ಮವನ್ನು 84 ಲಕ್ಷ ಯೋನಿಗಳಲ್ಲಿ ಬಿಸುಟಿ ಅವನು ಪುನರಪಿ ಜನನಂ ಪುರನಪಿ ಮರಣಂ ಎಂಬ ಚಕ್ರದಲ್ಲಿ ತಿರುಗುತ್ತಲೇ ಇರುವಂತೆ ಮಾಡುತ್ತೇನೆ ಪಾರ್ಥಾ. ಆದ್ದರಿಂದ ಪರಹಿಂಸೆ ಕಣ್ಣೀರನ್ನು ಬಿಡು. ಸತ್ಕರ್ಮದಲ್ಲಿ ತೊಡಗು. ನನ್ನ ಸನ್ನಿಧಾನದಲ್ಲಿ ನೆಲೆ ನಿಲ್ಲು.

# ಅಧಿಕಾರಿಗಳ ನಿರ್ಲಕ್ಷ್ಯ: ರಂಗೇನಹಳ್ಳಿ ಏತ ನೀರಾವರಿ ಅಪೂರ್ಣ

## ಕಲ್ಲೊಡ್ಡೆ ಬಾರೆ ಕಾವಲು ಅಕ್ರಮ ಗಣಿಗಾರಿಕೆ ಸಮೀಕ್ಷೆಗೆ ಶೀಘ್ರ ಅಧಿಕಾರಿಗಳ ತಂಡ: ಶಾಸಕ ಎ.ಮಂಜು


• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಹಳ್ಳಿ ಮೈಸೂರು ಹೋಬಳಿಯ 22 ಗ್ರಾಮದ ಕರೆಕಟ್ಟೆಗಳಿಗೆ ಜೀವಜಲ ವಾಗಬೇಕಿರುವ ರಂಗೇನಹಳ್ಳಿ ಏತ ನೀರಾವರಿ ಯೋಜನೆ ಅಧಿಕಾರಿಗಳ ನಿರ್ಲಕ್ಷದಿಂದ ಇಂದಿಗೂ ಅಪೂರ್ಣ ವಾಗಿಲ್ಲ ಎಂದು ಅರಕಲಗೂಡು ಶಾಸಕ ಎ.ಮಂಜು ಬೇಸರ ವ್ಯಕ್ತಪಡಿಸಿದರು.

ತಾಲ್ಲೂಕಿನ ದೊಡ್ಡಕಾಡನೂರು ಗ್ರಾಮದ ನೀರಾವರಿ ಇಲಾಖೆಯ ಉಪವಿಭಾಗದ ಕಚೇರಿಯಲ್ಲಿ ರಂಗೇನ ಹಳ್ಳಿ ಏತನೀರಾವರಿ ಯೋಜನೆಯ ಕುರಿತು ಪರಿಶೀಲನೆ ನಡೆಸಿದ ಅವರು, ಕಳೆದ 8 ವರ್ಷದ ಹಿಂದೆ 43 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿ ಕೊಳ್ಳಲಾಗಿತ್ತು. ಒಂದೂವರೆ ವರ್ಷ ದಲ್ಲಿ ಮುಗಿಯಬೇಕಿದ್ದ ಕಾಮಗಾರಿ ಇಂದಿಗೂ ಪೂರ್ಣಗೊಂಡಿಲ್ಲ. ಇದೀಗ ವಿಧಾನಸಭಾ ಅಧಿವೇಶನದಲ್ಲಿ 2.5 ಕೋಟಿ ರೂ. ಹೆಚ್ಚುವರಿ ಅನುದಾನ ತರುವಲ್ಲಿ ಸಫಲನಾಗಿದ್ದೇನೆ ಎಂದು ತಿಳಿಸಿದರು.

ಯೋಜನೆ ವ್ಯಾಪ್ತಿಯಲ್ಲಿ 7 ಜನ ರೈತರು ತಮ್ಮ ಭೂಮಿಗೆ ಪರಿಹಾರ ಕ್ಕಾಗಿ ಡಿಮ್ಯಾಂಡ್ ಇರಿಸಿದ್ದಾರೆ. ಅವರಿಗೆ ಮಾಹಿತಿ ಕೊರತೆ ಇದೆ. ಈ ವರೆಗೆ ಭೂಮಿ ನೀಡಿದ ರೈತರಿಗೆ ಕೊಡುವಂತೆ ಸೂಕ್ತ ಪರಿಹಾರ ನೀಡಲಾಗುವುದು. ಈ ಬಗ್ಗೆ ಸಂಶಯ ಬೇಡ. ಇಂಜಿನಿಯರ್‌ಗಳು ಮತ್ತು ಆಭಾಗದ ಜನಪ್ರತಿನಿಧಿಗಳು ರೈತರ ಮನವೊಲಿಸಬೇಕು. ಕೆ.ಆರ್.ಪೇಟೆ ವ್ಯಾಪ್ತಿಯ ಬೇವಿನಹಳ್ಳಿ ಗ್ರಾಮದ ಸಮೀಪ ಹೇಮಾವತಿ ನದಿಯಿಂದ ಜಾಕ್‌ವೆಲ್ ಮೂಲಕ ಏತನೀರಾವರಿಗೆ ನೀರು ಹರಿಸಬೇಕಿದೆ.

ಆದ ಕಾರಣ ಆ ಭಾಗದ ಸರ್ಕಾರಿ ಭೂಮಿ ಸರ್ವೇ ಕಾರ್ಯ ನಡೆಯ ಬೇಕಿದೆ. ಜರೂರಾಗಿ ಈ ಕೆಲಸಗಳನ್ನು ಮಾಡುವ ಮೂಲಕ ಅಧಿಕಾರಿಗಳು ಮುಂದಿನ 2 ತಿಂಗಳೊಳಗೆ ಯೋಜನೆ



ಪೂರ್ಣಗೊಳಿಸುವಂತೆ ಎ.ಮಂಜು ಅವರು ತಾಕೀತು ಮಾಡಿದರು.

ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಸದನದಲ್ಲಿ ಮಾತನಾಡಿದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಆ ರೀತಿ ಮಾತ ನಾಡಿದ್ದು ಶೋಭೆ ತರುವಂತಹದ್ದಲ್ಲ. ಬಹುಶಃ ಸಚಿವ ಸ್ಥಾನ ನೀಡಲಿ ಎಂಬ ಉತ್ಪ್ರೇಕ್ಷೆಯಿಂದ ಆ ರೀತಿ ಮಾತ ನಾಡಿರಬಹುದು. ಆದರೆ ಒಬ್ಬ ಜನ ಪ್ರತಿನಿಧಿಯಾಗಿ ಆ ರೀತಿ ಪದ ಬಳಕೆ ಇದೆಯಲ್ಲ ಅದು ಯಾರ ಬಗ್ಗೆ, ಯಾವುದೇ ಪಕ್ಷದವರಾದರೂ ಮಾತ ನಾಡಿದರೆ ಒಪ್ಪುವಂತಹದ್ದಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕಿನ ಕಲ್ಲೊಡ್ಡೆ ಬಾರೆ ಕಾವಲು ಮೀಸಲು ಅರಣ್ಯ ಪ್ರದೇಶ ದಲ್ಲಿ ಅಕ್ರಮ ಗಣಿಗಾರಿಕೆ ನಡೆದಿರುವ ವಿಚಾರ ಕುರಿತು ವಿಧಾನ ಸಭೆಯಲ್ಲಿ ಗಮನ ಸೆಳೆದ ಬಗ್ಗೆ, ಮೈಸೂರು ಮಹಾರಾಜರು ಈ ಪ್ರದೇಶವನ್ನು ದನಕರುಗಳನ್ನು ಮೇಯಿಸಲು ರೈತರ ಅನುಕೂಲತೆಗೆಂದು ಮೀಸಲಿರಿಸಿ ದ್ದರು. ಇಂದು ಕೆಲವರು ರೈತರೇ ಹೊಸ ಪರವಾನಗಿ ಕೋರಿರುವ ಪರ ನಿಂತು ಪಶ್ಚಾತ್ತಾಪ ಪಡುತ್ತಿದ್ದಾರೆ. ಇದರಿಂದ ಗ್ರಾಮದಲ್ಲಿನ ಮನೆಗಳಿಗೆ ಬಿರುಕು, ಪರಿಸರ ಹಾನಿ, ಸುತ್ತ ಮುತ್ತಲಿನ ಬೆಳೆ ಬೆಳೆಯಲಾಗದ ಪರಿಸ್ಥಿತಿ ಕಂಡು ಸದನದಲ್ಲಿ ಮಾತ ನಾಡಿದ್ದರ ಬಗ್ಗೆ ಸ್ಥಳಕ್ಕೆ ಅಧಿಕಾರಿಗಳ ತಂಡ ಭೇಟಿ ನೀಡಲಿದ್ದಾರೆ. ಕಾನೂನು ಮೀರಿ ಪರವಾನಗಿ ನೀಡಿ ಕೊಳ್ಳೆ ಹೊಡೆದಿರುವ ಬಹುತೇಕ ಸ್ಥಳೀಯ ಅಧಿಕಾರಿಗಳ ಮೇಲೆ ಕ್ರಮವಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

ನೀರಾವರಿ ಇಲಾಖೆಯ ಎಇಇ ಕೇಶವಮೂರ್ತಿ, ಎಇ ರಾಜೇಶ್, ಕಂದಾಯ ಇಲಾಖೆ ಅಧಿಕಾರಿ ಜಯಲಕ್ಷ್ಮಿ, ಜೆಡಿಎಸ್ ತಾಲೂಕು ಅಧ್ಯಕ್ಷ ಎಚ್.ಎಸ್.ಪುಟ್ಟಸ್ವಾಮಪ್ಪ, ಜಿಪಂ ಮಾಜಿ ಸದಸ್ಯ ಸಾಂಬಸದಾ ಶಿವಪ್ಪ ಹಾಜರಿದ್ದರು.

## ಬೇಲೂರಿನಲ್ಲಿ ಗೃಹ ಸಚಿವ ಜಿ.ಪರಮೇಶ್ವರ್ ಪೊಲೀಸರಿಗೆ ಸೂಚನೆ

# ಶಿಸ್ತು, ಪ್ರಾಮಾಣಿಕತೆ ರೂಢಿಸಿಕೊಳ್ಳಿ

• ಪ್ರಜೋದಯ ವರದಿ

**ಬೇಲೂರು:** ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರ್ವಹಣೆಯಲ್ಲಿ ಇನ್ನಷ್ಟು ಶಿಸ್ತು, ಪ್ರಾಮಾಣಿಕತೆ ಮತ್ತು ಜನಸ್ನೇಹಿ ನಿಲುವು ಹೊಂದಬೇಕು ಎಂದು ರಾಜ್ಯ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ಸೂಚನೆ ನೀಡಿದರು.

ಖಾಸಗಿ ಕಾರ್ಯಕ್ರಮದ ನಿಮಿತ್ತ ಚಿಕ್ಕಮಗಳೂರಿಗೆ ತೆರಳುತ್ತಿದ್ದ ಸಂದರ್ಭದಲ್ಲೇ ಬೇಲೂರು ಪೊಲೀಸ್ ಠಾಣೆಗೆ ದಿಢೀರ್ ಭೇಟಿ ನೀಡಿ ಪೊಲೀಸ್ ಇಲಾಖೆಯ ಕಾರ್ಯ ಚಟು ವಟಿಕೆಗಳ ಬಗ್ಗೆ ಪರಿಶೀಲನೆ ನಡೆಸಿದ ನಂತರ ಮಾತನಾಡಿದರು.

ಪೊಲೀಸ್ ಠಾಣೆಯಲ್ಲಿನ ವ್ಯವಸ್ಥೆ, ಸಾರ್ವಜನಿಕರಿಗೆ ನೀಡಲಾಗುತ್ತಿರುವ ಸೇವೆಗಳು, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಕೈಗೊಳ್ಳಲಾಗುತ್ತಿರುವ ಕ್ರಮಗಳು ಸೇರಿದಂತೆ ವಿವಿಧ ವಿಷಯ ಗಳ ಕುರಿತು ಪೊಲೀಸ್ ಅಧಿಕಾರಿಗ ಳೊಂದಿಗೆ ಚರ್ಚೆ ನಡೆಸಿದರು. ಅಪ



ರಾಧ ಪ್ರಕರಣಗಳ ಸ್ಥಿತಿ, ತನಿಖೆಯ ಪ್ರಗತಿ ಹಾಗೂ ಸಾರ್ವಜನಿಕರೊಂದಿಗೆ ಪೊಲೀಸರ ವರ್ತನೆ ಕುರಿತು ಮಾಹಿತಿ ಪಡೆದುಕೊಂಡರು.

ಅಲ್ಲದೆ, ಸಾರ್ವಜನಿಕರ ಸಮಸ್ಯೆ ಗಳಿಗೆ ತ್ವರಿತವಾಗಿ ಸ್ಪಂದಿಸುವಂತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಯಾವುದೇ ಸಡಿಲತೆ ತೋರಬಾರದು ಎಂದು ಪೊಲೀಸ್ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು.

ಈ ವೇಳೆ ಅಪರ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ವೃತ್ತ ನಿರೀಕ್ಷಕ ರೇವಣ್ಣ, ಪೊಲೀಸ್ ಉಪನಿರೀಕ್ಷಕ ಎಸ್.ಜಿ. ಪಾಟೀಲ್ ಅವರು ಉಪಸ್ಥಿತರಿದ್ದು, ಠಾಣೆಯ ಕಾರ್ಯವೈಖರಿ ಕುರಿತು ಗೃಹ ಸಚಿವರಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ಛಲವಾದಿ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಮಂಜುನಾಥ್ ಅವರು ಹಾಜರಿದ್ದರು.

# ಜನರ ಪಾಲಿಗೆ ಕಾಂಗ್ರೆಸ್ ಸತ್ತುಹೋಗಿದೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ಅಭಿವೃದ್ಧಿಗೆ ಸರ್ಕಾರದ ಬಳಿ ಹಣವಿಲ್ಲ. ನೌಕರರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲ. ದ್ವೇಷ ಭಾಷಣ ಪ್ರತಿಬಂಧಕ ಮಸೂದೆ ಬಗ್ಗೆ ಅಧಿವೇಶನದಲ್ಲೇ ಸರಿಯಾಗಿ ಚರ್ಚೆ ಮಾಡಬೇಕಿತ್ತು. ಅದನ್ನು ಬಿಟ್ಟು ಕಾಂಗ್ರೆಸ್ ವಿರುದ್ಧ ಮಾತನಾಡುವವ ರನ್ನು ಪತ್ತೆ ಮಾಡಲು 67 ಕೋಟಿ ರೂ. ದುಂದುವೆಚ್ಚ ಮಾಡಲಾಗು ತ್ತಿದ್ದು, ಕಾಂಗ್ರೆಸ್ ಜನರ ಪಾಲಿಗೆ ಸತ್ತು ಹೋಗಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ವಿಶೇಷ ಅಧಿ ವೇಶನದಲ್ಲಿ ಕಾಂಗ್ರೆಸ್‌ನ ನುಂಗಣ್ಣಗಳ ಭ್ರಷ್ಟಾಚಾರವನ್ನು ಬಯಲು ಮಾಡಿ ದ್ದೇವೆ. ಇದರ ವಿರುದ್ಧ ಇನ್ನಷ್ಟು ಹೋರಾಟ ಮಾಡುತ್ತೇವೆ. ಕಾಂಗ್ರೆಸ್



ನ ಲೂಟಿ ನೋಡಿ ಗಾಂಧೀಜಿಯ ಕೈಗೆ ಕೋಲು ಬಂದಿದೆ ಎಂದು ಬಿಜೆಪಿ ಜಾಹೀರಾತನ್ನು ಸಮರ್ಥಿಸಿಕೊಂಡರು.

ತಿರುಪತಿ ಭಾರತೀಯರ ಶ್ರದ್ಧಾ ಕೇಂದ್ರ. ತಿರುಪತಿಯಲ್ಲಿ ಕಳಪೆ ತುಪ್ಪ ಬಳಸಿದ್ದಕ್ಕೆ ಸಂಬಂಧಿಸಿದಂತೆ ತನಿಖೆ ಮಾಡಲಾಗಿದೆ. ಧರ್ಮಸ್ಥಳದ ಪಾವಿ ತ್ರ್ಯತೆ ಹಾಳು ಮಾಡಲು ಸಿಎಂ ಸಿದ್ದ ರಾಮಯ್ಯನವರೇ ತಂತ್ರ ಮಾಡಿದ್ದರು ಎಂದು ಆರೋಪಿಸಿದರು.

ಅಬಕಾರಿ ಇಲಾಖೆಯಲ್ಲಿ ನಡೆದ 6,000 ಕೋಟಿ ರೂ. ಹಗರಣ ಸಂಬಂಧ ಐದು ದಾಖಲೆಗಳನ್ನು ಹಾಗೂ ಆಡಿಯೋ ದಾಖಲೆಗಳನ್ನು ನೀಡಿದ್ದೇನೆ. ಇಷ್ಟಾದರೂ ಸರ್ಕಾರ ಇನ್ನೂ ಸಾಕ್ಷಿ ಕೇಳುತ್ತಿದೆ. ಈ ಹಿಂದೆ 40 ಪರ್ಸೆಂಟ್ ಭ್ರಷ್ಟಾಚಾರವೆಂದು ಗುತ್ತಿಗೆದಾರರು ಹೇಳಿದ್ದಕ್ಕೆ ಕಾಂಗ್ರೆಸ್ ನಾಯಕರು ಅಂದಿನ ಬಿಜೆಪಿ ಸರ್ಕಾ ರದ ಮೇಲೆ ಆರೋಪ ಮಾಡಿತ್ತು. ಈಗ ಮದ್ಯ ಮಾರಾಟಗಾರರ ಸಂಘ ದವರು 80 ಪರ್ಸೆಂಟ್ ಭ್ರಷ್ಟಾಚಾರ ವೆಂದು ಹೇಳಿದ್ದು, ಆ ಬಗ್ಗೆ ರಾಹುಲ್ ಗಾಂಧಿಗೂ ದೂರು ನೀಡುವುದಾಗಿ ಹೇಳಿದ್ದಾರೆ. ಆದರೂ ಸಿಎಂ ಸಿದ್ದರಾ ಮಯ್ಯ, ಸಚಿವ ತಿಮ್ಮಾಪುರ ಅವರ ರಾಜೀನಾಮೆ ಪಡೆಯದೆ ಜನರಿಗೆ ದ್ರೋಹ ಮಾಡಿದ್ದಾರೆ ಎಂದರು.

ಸಚಿವರ ರಾಜೀನಾಮೆ ಪಡೆದಿಲ್ಲ ಎಂದು ಜನರು ಹೇಳುತ್ತಿದ್ದಾರೆ. ಇದರ ವಿರುದ್ಧ ಇನ್ನಷ್ಟು ಹೋರಾಟ ಮಾಡಿ 6,000 ಕೋಟಿ ರೂ. ವಸೂಲಿ ಮಾಡಿ ಜನರ ಹಣ ಉಳಿಸುತ್ತೇವೆ ಎಂದರು.

# ಶೀಘ್ರವೇ ಅರ್ಹರಿಗೆ ನಿವೇಶನ ವಿತರಣೆ: ಹೆಚ್.ಕೆ.ಸುರೇಶ್

• ಪ್ರಜೋದಯ ವರದಿ

**ಬೇಲೂರು:** ಪುರಸಭೆ ವ್ಯಾಪ್ತಿಯಲ್ಲಿ ವಾಸವಿರುವ ನಿವೇಶನ ರಹಿತ ಬಡ ಕುಟುಂಬಗಳಿಗೆ ಆಶ್ರಯ ಕಲ್ಪಿಸುವ ದೂರದೃಷ್ಟಿಯ ಹಿನ್ನೆಲೆಯಲ್ಲಿ ಪಟ್ಟಣ ಸಮೀಪದ ರಾಯಾಪುರ ಗ್ರಾಮದ ಸರ್ವೆ ನಂ: 19 ರ ಜಮೀನಿನಲ್ಲಿ ನಿವೇ ಶನಗಳನ್ನಾಗಿ ಮಾರ್ಪಡಿಸಿದ್ದು ಶೀಘ್ರವೇ ಅರ್ಹರಿಗೆ ವಿತರಿಸಲಾಗುವುದು ಎಂದು ಶಾಸಕ ಎಚ್.ಕೆ.ಸುರೇಶ್ ಹೇಳಿದರು.

ಪಟ್ಟಣ ಸಮೀಪದ ರಾಯಾಪುರ ಗ್ರಾಮದಲ್ಲಿ ಪುರಸಭೆಗೆ ಸೇರಿದ ನಿವೇಶನಗಳ ಸಮೀಪ ಮೂಲ ಸೌಲಕರ್ಯ ಕಲ್ಪಿಸುವ ಕಾಮಗಾರಿಗೆ ಶುಕ್ರವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ವಿಶ್ವ ವಿಖ್ಯಾತ ಪ್ರವಾಸಿ ತಾಣ ಬೇಲೂರು ಪಟ್ಟಣ ದಲ್ಲಿ ಗುಡಿಸಲುಗಳು, ತಗಡಿನ ಶೀಟಿನ ಮನೆಗಳಿಂದ ಪ್ರವಾಸಿಗರಿಗೆ



ಮುಜುಗರವಾಗಬಾರದು ಹಾಗೂ ವಸತಿ ರಹಿತರು ಇರಬಾರದೆಂಬ ಉದ್ದೇಶದಿಂದ ರಾಯಾಪುರದಲ್ಲಿ ಪುರಸಭೆಗೆ ಮೀಸಲಾದ ನಿವೇಶನಗಳ ಸಮೀಪ ಮೂಲ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಆಶ್ರಯ ಯೋಜನೆಗೆ ಸರ್ಕಾರ ಅನುದಾನ ಕೊಡುವುದಿಲ್ಲ. ಆದರೆ ಇಲ್ಲಿನ ನಿವಾಸಿಗಳಿಗೆ ಪೂರ್ವಭಾವಿ ಯಾಗಿ ಸೌಲಭ್ಯ ಕಲ್ಪಿಸುವುದಕ್ಕಾಗಿ 30 ಲಕ್ಷ ರೂ. ಅನುದಾನದಲ್ಲಿ ಕಾಮ ಗಾರಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಇಲ್ಲಿ ಸಾರ್ವಜನಿಕರಿಗೆ ಅನಾನೂಕೂಲ ಆಗಬಾರದೆಂದು ಕೊಳವೆ ಬಾವಿ, ವಿದ್ಯುತ್, ರಸ್ತೆ, ಚರಂಡಿ ಸೇರಿದಂತೆ ಇತರೆ ಕಾಮಗಾರಿಗಳಿಗೆ ಆದ್ಯತೆ ನಿಡಲಾಗಿದೆ. ಮತ್ತು ಇಲ್ಲಿ ಜಮೀನು ಉಳುಮೆ ಮಾಡುತ್ತಿರುವ ಮೂಲ ಮಂಜೂರುದಾರರಿಗೆ ತೊಂದರೆ ಯಾಗದಂತೆ ಪುರಸಭೆಗೆ ಮಾತ್ರ ಮೀಸಲಾದ 5 ಎಕರೆ ಜಮೀನಿನಲ್ಲಿ ನಿವೇಶನಗಳನ್ನು ಗುರುತಿಸಿ ಕೆಲಸ ಮಾಡಿಸಲಾಗುತ್ತಿದೆ. ಇಲ್ಲಿ ಎಲ್ಲ ಕೆಲಸಗಳು ಮುಗಿದ ನಂತರ ಶೀಘ್ರವೇ ನಿವೇಶನಗಳನ್ನು ಅರ್ಹರಿಗೆ ವಿತರಿಸ ಲಾಗುವುದು ಎಂದರು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಮಾತನಾಡಿ, ಪುರಸಭೆಯಿಂದ 1995 ರಲ್ಲಿ ನಿವೇಶನ ವಿತರಿಸಲಾಗಿತ್ತು. ನಂತರ ಚನ್ನಕೇಶವ ನಗರದಲ್ಲಿ 2001 ರಲ್ಲಿ ವಿತರಿಸಲಾಗಿತ್ತು. ನಂತರ ಇಲ್ಲಿವರೆಗೂ ನಿವೇಶನ ಕೊಡಲು ಸಾಧ್ಯವಾಗಿಲ್ಲ. ಆದರೆ ಈಗ 2026 ರಲ್ಲಿ ರಾಯಾಪುರ ಗ್ರಾಮದಲ್ಲಿ ನಿವೇಶನ ಗುರುತಿಸಿದ್ದು ಇಲ್ಲಿ ವಿತರಿ ಸಲು ಕ್ರಮ ಕೈಗೊಳ್ಳಲಾಗುವುದು. ಮತ್ತು ಅರಸೀಕೆರೆಯಲ್ಲಿರುವ ಎಚ್ ಪ್ರಾಜೆಕ್ಟ್ ರೀತಿಯಲ್ಲಿ +3 ಮಾದರಿ ಯಲ್ಲಿ ಒಂದೇ ನಿವೇಶನದಲ್ಲಿ ಮೂರು ಮನೆಗಳನ್ನು ಕಟ್ಟಿಸಿ ಕೊಟ್ಟಲ್ಲಿ ಅನುಕೂಲವಾಗುತ್ತದೆ ಎಂದರು.

ಪುರಸಭೆ ಸದಸ್ಯರಾದ ಎ.ಆರ್. ಅಶೋಕ್, ಮೀನಾಕ್ಷಿ ವೆಂಕಟೇಶ್, ಪ್ರಭಾಕರ್, ಆಶ್ರಯ ಸಮಿತಿ ಸದಸ್ಯರಾದ ಹರೀಶ್, ಇಕ್ಬಾಲ್, ನಾಗೇಶ್, ತಹಸೀಲ್ದಾರ್ ಶ್ರೀಧರ್ ಕಂಕನವಾಡಿ, ಪುರಸಭೆ ಇಂಜಿನಿಯರ್ ಮೋಹನ್, ಆರ್.ಐ.ಲಕ್ಷಣ್ ಸೇರಿ ದಂತೆ ಇನ್ನಿತರರು ಹಾಜರಿದ್ದರು.

# ಸಕಲೇಶಪುರದಲ್ಲಿ ಕಾರ್ಮಿಕರಿಗೆ ವಸತಿ ಸಮಸ್ಯೆ: ಆರೋಪ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನಾದ್ಯಂತ ಸಾವಿರಾರು ಕಾರ್ಮಿಕರು ಎದುರಿಸುತ್ತಿರುವ ವಸತಿ ಸಮಸ್ಯೆ ಅತ್ಯಂತ ಗಂಭೀರವಾಗಿದ್ದು, ಸರ್ಕಾರ ಈವರೆಗೆ ಯಾವುದೇ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ ಎಂದು ನಿವೇಶನ ಹೋರಾಟ ಸಮಿತಿಯ ಅಧ್ಯಕ್ಷ ಯೂನಸ್ ಅವರು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಕಲೇಶಪುರ ಕಾಫಿ ಬೆಳೆಯುವ ಪ್ರಮುಖ ಪ್ರದೇಶವಾಗಿದ್ದು, ದಶಕಗಳಿಂದ ಎಸ್ಟೇಟ್‌ಗಳ ಲೈನ್ ಮನೆಗಳಲ್ಲಿ ವಾಸಿಸುತ್ತಿರುವ ಕಾರ್ಮಿಕರು ಇದೀಗ ಕೆಲಸದ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಕೆಲಸ ಕಳೆದುಕೊಂಡರೆ ಲೈನ್ ಮನೆಗಳನ್ನು ಖಾಲಿ ಮಾಡಬೇಕಾದ ಅನಿವಾರ್ಯತೆ ಇದ್ದು, ಬಹುತೇಕ ಕಾರ್ಮಿಕರಿಗೆ ಸ್ವಂತ ನಿವೇಶನವೂ ಇಲ್ಲ, ಮನೆವೂ




ಇಲ್ಲ ಎಂಬುದು ದುಃಖಕರ ಸಂಗತಿ ಎಂದು ಹೇಳಿದರು.

ಸಕಲೇಶಪುರದಲ್ಲಿ ಭೂಮಿಯ ಬೆಲೆ ಹೆಚ್ಚಿರುವುದರಿಂದ ಬಡ ಕಾರ್ಮಿಕರಿಗೆ ನಿವೇಶನ ಖರೀದಿಸುವುದು ಅಸಾಧ್ಯವಾಗಿದೆ. ಕಳೆದ ಹಲವು ವರ್ಷಗಳಿಂದ ಸರ್ಕಾರದಿಂದ ಸಮರ್ಪಕ ನಿವೇಶನ ಹಂಚಿಕೆ ನಡೆದಿಲ್ಲ. ಸರ್ಕಾರಿ ಭೂಮಿಯಲ್ಲಿ ಗುಡಿಸಲು ಹಾಕಿಕೊಂಡರೆ ತೆರವುಗೊಳಿಸಲಾಗುತ್ತದೆ. ಆದರೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಎಸ್ಟೇಟ್ ಕಾರ್ಮಿಕರನ್ನು ಸಂಘಟಿಸಿ ನಿವೇಶನ ಮಂಜೂರಾತಿಗಾಗಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಕಾರ್ಯದರ್ಶಿ ಸೌಮ್ಯ ಮಾತನಾಡಿ, 201516ರಿಂದಲೂ ಹಲವು ಪಂಚಾಯಿತಿಗಳಲ್ಲಿ ನಿವೇಶನಕ್ಕಾಗಿ ಮನವಿಗಳು ಸಲ್ಲಿಸಲ್ಪಟ್ಟಿದ್ದರೂ 78 ವರ್ಷಗಳಾದರೂ ಪ್ರಕ್ರಿಯೆ ಪೂರ್ಣಗೊಂಡಿಲ್ಲ. ಕೇಂದ್ರ ಸರ್ಕಾರ ಜಾರಿ ಮಾಡಿರುವ ನಾಲ್ಕು ಕಾರ್ಮಿಕ ಸಂಹಿತೆಗಳಿಂದ ತೋಟ ಕಾರ್ಮಿಕರು ನೇರ ಹೊಡೆತ ಅನುಭವಿಸುತ್ತಿದ್ದು, 400450 ರೂ. ಕೂಲಿಯಲ್ಲಿ ದುಡಿಯುವವರು ಲೈನ್ ಮನೆ ಕಳೆದುಕೊಂಡು ಬಾಡಿಗೆ ಮನೆಗಳಿಗೆ ಹೋಗುವ ಸ್ಥಿತಿಗೆ ತಲುಪಿದ್ದಾರೆ. ತಿಂಗಳಿಗೆ 45 ಸಾವಿರ ರೂ. ಬಾಡಿಗೆ ನೀಡುವುದು ಅಸಾಧ್ಯವಾಗಿದ್ದು, ಮಕ್ಕಳ ಶಿಕ್ಷಣ ಹಾಗೂ ಜೀವನ ನಿರ್ವಹಣೆ ಗಂಭೀರ ಸವಾಲಾಗಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ನಿವೇಶನ ಹಂಚಿಕೆಗಾಗಿ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಹೋರಾಟವನ್ನು ತೀವ್ರಗೊಳಿಸಲಾಗುವುದು. ಫೆಬ್ರವರಿ 12 ರಂದು ನಡೆಯುವ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿಯೂ ಪ್ಲಾಂಟೇಶನ್ ಕಾರ್ಮಿಕರಿಗೆ ನಿವೇಶನ ನೀಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟು ಹೋರಾಟ ನಡೆಯಲಿದೆ. ಈ ಹೋರಾಟಕ್ಕೆ ನಿವೇಶನ ರಹಿತರು ಹಾಗೂ ಸಾರ್ವಜನಿಕರು ಕೈಜೋಡಿಸಬೇಕೆಂದು ಅವರು ಮನವಿ ಮಾಡಿದರು.

ಉಪಾಧ್ಯಕ್ಷ ಪ್ರಸನ್ನಕುಮಾರ್, ಅರವಿಂದ್ ದೇವಾಲಕೆರೆ ಇದ್ದರು.

# ಸ್ವಾವಲಂಬಿ ಸುಖೀ ಕುಟುಂಬ ನಿರ್ಮಾಣ

• ಪ್ರಜೋದಯ ವರದಿ

**ಆಲೂರು:** ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಪರಿಕಲ್ಪನೆಯಲ್ಲಿ ಸ್ವಾವಲಂಬಿ ಸುಖೀ ಕುಟುಂಬವನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಪ್ರಾದೇಶಿಕ ಕಚೇರಿ ಜ್ಞಾನವಿಕಾಸ ಯೋಜನಾಧಿಕಾರಿ ಮೂಕಾಂಬಿಕ ಅವರು ತಿಳಿಸಿದರು.

ನೇರಲಕೆರೆ ಕೊಪ್ಪಲು ಗ್ರಾಮದ ರಂಗಮ್ಮ ವೃದ್ಧ ದಂಪತಿಗಳ ಕುಟುಂಬಕ್ಕೆ ವಾತ್ಸಲ್ಯ ಕಿಟ್ ವಿತರಣೆ ಮಾಡಿದ ನಂತರ ಮಾತನಾಡಿದ ಅವರು, ಸ್ವಾವಲಂಬನೆಗಾಗಿ ಪ್ರಯತ್ನಿಸಲು ಸಾಧ್ಯವಾಗದಂತಹ ಅಸಹಾಯಕ ಕುಟುಂಬಗಳು, ವ್ಯಕ್ತಿಗಳು ನಮ್ಮ ನಡುವೆ ಇದ್ದಾರೆ. ಇಂತಹವರಿಗೆ ಸದಾಕಾಲ ಸಹಾಯಹಸ್ತದ ಅಗತ್ಯವಿರುತ್ತದೆ. ಸರ್ವೇಕ್ಷಣಾ ವರದಿಯ



ಆಧಾರದಂತೆ ನಿರ್ಗತಿಕ ಫಲಾನುಭವಿಗಳಿಗೆ, ಮಾಸಾಶನ ಪಡೆಯಲು ಅರ್ಹತೆ ಇರುವ ಬಡ ಕುಟುಂಬಗಳನ್ನು ಗುರುತಿಸಿ, ಅಗತ್ಯ ಸೌಲಭ್ಯಗಳಾದ ಬಟ್ಟೆ, ಹೊದಿಕೆ ಮತ್ತು ಪಾತ್ರೆಗಳನ್ನು ಕಿಟ್ ರುಪದಲ್ಲಿ ಉಚಿತವಾಗಿ ವಿತರಿಸಲಾಗುತ್ತಿದೆ ಎಂದರು.

ಕ್ಷೇತ್ರ ಯೋಜನಾಧಿಕಾರಿ ರತ್ನಾಕರ ಕೊಠಾರಿ ಅವರು ಮಾತನಾಡಿ, ಗ್ರಾಮಗಳಲ್ಲಿರುವ ದುರ್ಬಲರು, ವಯೋವೃದ್ಧರು, ಅಂಗವಿಕಲ ಮಕ್ಕಳಿಗೆ ಸೇರಿ 112 ಜನರಿಗೆ ಮಾಸಾಶನ ನೀಡುವ ಕಾಯಕವನ್ನು ಮಾಡುವಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯೋನ್ಮುಖವಾಗಿದೆ. ಬಡಜನರ ಸಮಸ್ಯೆಗಳನ್ನು ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಸಮಸ್ಯೆಗಳಿಗೆ ಗ್ರಾಮಾಭಿವೃದ್ಧಿ ಯೋಜನೆಯು ಸ್ಪಂದಿಸುತ್ತಿದೆ ಎಂದರು.

ಬೆಳ್ಳಾವರ ಗಾಮದ ಈರಮ್ಮ, ಅಂಚಿಹಳ್ಳಿ ಪಾರ್ವತಮ್ಮ, ಹುಸೂರು ರಂಗಮ್ಮ, ಮದಗಟ್ಟ ಹೂವಮ್ಮ ಮತ್ತು ಸಾವಿತ್ರಮ್ಮ ಅಂಕಪುರ ಚಿನ್ನಮ್ಮ, ಬೈಲಹಳ್ಳಿಯ ಶಿವಮ್ಮ, ಕಟ್ಟಾಯ ಲಕ್ಷ್ಮಮ್ಮ ಅವರಿಗೆ ಕಿಟ್ ಗಳನ್ನು ವಿತರಿಸಲಾಯಿತು.

ಜ್ಞಾನವಿಕಾಸ ಸಮನ್ವಯಧಿಕಾರಿ ಜಿ.ಸರಸ್ವತಿ, ಗಿರೀಶ್, ಸೇವಾ ಪ್ರತಿನಿದಿ ರೂಪ ಉಪಸ್ಥಿತರಿದ್ದರು.

**112 ಜನರಿಗೆ ವಾತ್ಸಲ್ಯ ಕಿಟ್ ವಿತರಣೆ:** ಆಲೂರು ಕಸಬಾ ನೇರಲಕೆರೆ ಕೊಪ್ಪಲು ವೃದ್ಧ ದಂಪತಿಗಳಿಗೆ ವಾತ್ಸಲ್ಯ ಕಿಟ್ ವಿತರಿಸಲಾಯಿತು. ಮೂಕಾಂಬಿಕ ರತ್ನಾಕರ ಕೊಠಾರಿ, ಜಿ.ಸರಸ್ವತಿ, ಗಿರೀಶ್, ರೂಪ ಇದ್ದರು.

# 1 ಕೋಟಿ ರೂ. ಅನುದಾನದಲ್ಲಿ ಭೋವಿ ಸಮುದಾಯ ಭವನ

## ಸೋಂಪುರ ಗ್ರಾಮದ ಸಮೀಪ ಭೂಮಿ ಪೂಜೆ ನೆರವೇರಿಸಿದ ಶಾಸಕ ಸುರೇಶ್

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಸೋಂಪುರ ಗ್ರಾಮದ ಸಮೀಪ ಶುಕ್ರವಾರ ಶ್ರೀ ಸಿದ್ದರಾಮೇಶ್ವರ ಭೋವಿ ಸಮುದಾಯ ಭವನ ಕಾಮಗಾರಿಗೆ ಶಾಸಕ ಎಚ್.ಕೆ.ಸುರೇಶ್ ಅವರು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕ ಎಚ್.ಕೆ.ಸುರೇಶ್, ಹಿಂದುಳಿದ ಸಮಾಜವಾದ ಭೋವಿ ಸಮಾಜದ ಅಭಿವೃದ್ಧಿಗೆ ಒತ್ತು ಕೊಡುವ ನಿಟ್ಟಿನಲ್ಲಿ ಶ್ರೀ ಸಿದ್ಧರಾಮೇಶ್ವರ ಭೋವಿ ಸಮುದಾಯ ಭವನಕ್ಕೆ ನಿರ್ಮಿಸಲು ಸಮಾಜ ಕಲ್ಯಾಣ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಜತೆಗೆ ಭೋವಿ ಸಮುದಾಯಕ್ಕೆ ಒಂದು ಭವನ ಬೇಕೆಂಬ ನಿಟ್ಟಿನಲ್ಲಿ ಮುಖಂಡರು ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಜಾಗವನ್ನು ಗುರುತಿಸಿ ಭವನ ನಿರ್ಮಾಣಕ್ಕೆ ಸರ್ಕಾರದಿಂದ ಹಣ ಮಂಜೂರು ಮಾಡಿಸಿ ತಂದು 1 ಕೋಟಿ ರೂ. ಅನುದಾನದಲ್ಲಿ ಕೆಲಸ ಮಾಡಿಸಲು ಭೂಮಿ ಪೂಜೆ ನೆರವೇರಿಸಲಾಗುತ್ತಿದೆ ಎಂದು ಹೇಳಿದರು.

ಗುತ್ತಿಗೆದಾರರು ಇಲ್ಲಿ ಗುಣಮಟ್ಟದ ಕೆಲಸವನ್ನು ಮಾಡಬೇಕು. ಮುಂದಿನ ದಿನಗಳಲ್ಲಿ ಭವನಕೆ ಮತ್ತು ಜನ ಸಾಮಾನ್ಯರಿಗೆ ಅನುಕೂಲವಾಗುಂತೆ ಮೂಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಲಾಗುವುದು. ಭೋವಿ ಸಮುದಾಯ ಮೊದಲಿನಿಂದಲೂ ನನ್ನೊಟ್ಟಿಗೆ ಇದ್ದರೂ ಏನನ್ನೂ ಕೇಳಿರಲಿಲ್ಲ. ಮುಂದೆ ಭೋವಿ ಸಮಾಜಕ್ಕೆ ಹೆಚ್ಚಿನ ಕೆಲಸಗಳನ್ನು ಮಾಡಿಸಲಾಗುವುದು. ಮತ್ತು ಇಲ್ಲಿ ಸರ್ಕಾರಿ ಭೂಮಿ ಉಳುಮೆ ಮಾಡುವ



ಜನರಿಗೂ ಬೇರೆಡೆ ಸ್ಥಳವನ್ನು ಕಲ್ಪಿಸಿ ಕೊಡಲು ಕ್ರಮ ಕೈಗೊಳ್ಳಲಾಗುವುದು. ಇಷ್ಟೆ ಅಲ್ಲದೆ ಈಗಾಗಲೇ ಕ್ಷೇತ್ರದಲ್ಲಿ ಹೆಚ್ಚು ಸಮುದಾಯ ಭವನಗಳನ್ನು ತಂದಿದ್ದರಿಂದ ಕೆಲಸ ಮಾಡಿಸಲಾಗುತ್ತಿದೆ. ಇದರೊಂದಿಗೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೂ ಹೆಚ್ಚಿನ ಕಾಳಜಿ ವಹಿಸಿ ಅನುದಾನ ತಂದು ಕೆಲಸ ಮಾಡಿಸಲಾಗುವುದು ಎಂದು ತಿಳಿಸಿದರು.

ಭೋವಿ ಸಮಾಜದ ಜಿಲ್ಲಾಧ್ಯಕ್ಷ ರಂಗನಾಥ್ ಮಾತನಾಡಿ, ನಮಗೆ ಸಮುದಾಯ ಭವನಕ್ಕೆ ಜಾಗ ಕೊಡುವ ಮೂಲಕ ಸಮಾಜಕ್ಕೆ ಉತ್ತಮ ಕೆಲಸ ಮಾಡಿ ಕೊಡುತಿದ್ದಾರೆ. ಮುಂದಿನ ದಿನಗಳಲ್ಲಿ ಇದಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ಮತ್ತು ಹೆಚ್ಚಿನ ಕೆಲಸಗಳನ್ನು ಮಾಡಿಸಿ ಕೊಡಲು ಶಾಸಕರು ಮುಂದಾಗಲಿದ್ದಾರೆ ಎಂಬ ಭರವಸೆ ಇದೆ. ನಾವು ಮತ್ತು ಸಮುದಾಯ ಸದಾ ಶಾಸಕರೊಂದಿಗೆ ಇರುತ್ತೇವೆ ಎಂದರು.

ಭೋವಿ ಸಮಾಜದ ತಾಲ್ಲೂಕು ಅಧ್ಯಕ್ಷ ಪರಮೇಶ್, ತಹಸೀಲ್ದಾರ್ ಶ್ರೀಧರ್ ಕಂಕನವಾಡಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಗ್ರೇಡ್-1 ಲಿಂಗರಾಜು, ಪೊಲೀಸ್ ಇನ್‌ಸ್ಪೆಕ್ಟರ್ ರೇವಣ್ಣ, ಲೋಕೋಪಯೋಗಿ ಇಲಾಖೆ ಎಇಇ ಕೃಷ್ಣೇಗೌಡ, ಭೋವಿ ಸಮಾಜದ ಮುಖಂಡರಾದ ಮಹೇಶ್, ರಮೇಶ್, ರಾಮಾಭೋವಿ, ದೇವರಾಜು ಇನ್ನಿತರರಿದ್ದರು.

# ಡ್ಯಾನ್ಸ್ ಚಾಂಪಿಯನ್‌ಶಿಪ್: ಹೃತುಶ್ರೀಗೆ ಚಿನ್ನದ ಪದಕ

• ಪ್ರಜೋದಯ ವರದಿ

**ಹಾಸನ:** ಪಾಂಡಿಚೆರಿಯಲ್ಲಿ ಇತ್ತೀಚೆಗೆ ನಡೆದ 11ನೇ ನ್ಯಾಷನಲ್ ಸ್ಪೋರ್ಟ್ಸ್ ಡ್ಯಾನ್ಸ್ ಚಾಂಪಿಯನ್ಶಿಪ್ 2025-26 ನೇ ಸ್ಪರ್ಧೆಯಲ್ಲಿ 12 ವರ್ಷದೊಳಗಿನ ಜೂನಿಯರ್ ವಿಭಾಗದಲ್ಲಿ ನಗರದ ನಿವಾಸಿಗಳಾದ ಹೇಮಲತಾ ಹೆಚ್ ಈ ಹಾಗೂ ಅಶ್ವಥ್ ನಾರಾಯಣ ಪಿ ಎಸ್ ರವರ ಸುಪುತ್ರಿ ಹೃತುಶ್ರೀ ಎ. ನಾರಾಯಣ್ ಅವರು ಸೋಲೊ ವಿಭಾಗದಲ್ಲಿ ಬೆಳ್ಳಿ, ಗ್ರೂಪ್ ವಿಭಾಗ ದಲ್ಲಿ ಚಿನ್ನ ಹಾಗೂ ಬ್ಯಾಟಲ್ ವಿಭಾಗದಲ್ಲಿ ಕಂಚಿನ ಪದಕಗಳನ್ನು ಗೆದ್ದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಹೃತುಶ್ರೀ ಎ.ನಾರಾಯಣ್ ಅವರು ನಗರದ ವಿದ್ಯಾಸೌಧ ಪಬ್ಲಿಕ್ ಶಾಲೆಯಲ್ಲಿ 7ನೇ ತರಗತಿ ಓದುತ್ತಿದ್ದು, 3 ಡ್ಯಾನ್ಸ್ ಕಂಪನಿಯಲ್ಲಿ ಕಳೆದ ಐದು ವರ್ಷಗಳಿಂದ ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ಸ್ಪೋರ್ಟ್ಸ್ ಡ್ಯಾನ್ಸ್ ಅಸೋಸಿಯೇಷನ್ ವತಿಯಿಂದ 2021ರಿಂದ 26ರ ವರೆಗೆ ನಡೆಸಿದ ಜೋನಲ್, ರಾಜ್ಯ ಹಾಗೂ ರಾಷ್ಟ್ರ ಮಟ್ಟಗಳಲ್ಲಿ, ಸೋಲೋ, ಕಪಲ್, ಗ್ರೂಪ್ ಹಾಗೂ ಬ್ಯಾಟಲ್ ವಿಭಾಗ ಗಳಲ್ಲಿ ಭಾಗವಹಿಸಿ ಇದುವರೆಗೆ ಒಟ್ಟು 12 ಚಿನ್ನ, 5 ಬೆಳ್ಳಿ ಹಾಗೂ 4 ಕಂಚಿನ ಪ್ರಶಸ್ತಿಗಳನ್ನು ಗೆದ್ದಿದ್ದಾರೆ.



ಸತತ ಮೂರು ಬಾರಿ ರಾಷ್ಟ್ರ ಮಟ್ಟದಲ್ಲಿ ಭಾಗ ವಹಿಸಿ ಈವರೆಗೆ ನಡೆದ ಸ್ಪರ್ಧೆಗಳಲ್ಲಿ ಒಟ್ಟು 12 ಚಿನ್ನದ ಪದಕಗಳನ್ನು ಗೆದ್ದು ಹ್ಯಾಟ್ರಿಕ್ ಸಾಧನೆ ಮಾಡಿರುವ ಇವರ ಈ ಸಾಧನೆಗೆ ಪ್ರೋತ್ಸಾಹಿಸಿದ ವಿದ್ಯಾಸೌಧ ಪಬ್ಲಿಕ್ ಶಾಲೆ ಹಾಗೂ 3 ಡ್ಯಾನ್ಸ್ ಕಂಪನಿಗೆ ಪೋಷಕರು ಅಭಿನಂದನೆ ಸಲ್ಲಿಸಿದ್ದಾರೆ.

## ಫೆ.13 ರಂದು ಬಹಿರಂಗ ಹರಾಜು

**ಹಾಸನ:** ಕರ್ನಾಟಕ ಲೋಕಾಯುಕ್ತ ಹಾಸನ ಕಚೇರಿಯಲ್ಲಿ ಹಳೆಯ ಮತ್ತು ನಿರುಪಯುಕ್ತ ಸಾಮಗ್ರಿಗಳು ಮತ್ತು ಗಣಕಯಂತ್ರ, ಸಂಬಂದಿಸಿದ ವಸ್ತುಗಳನ್ನು ಫೆ.13 ರಂದು ಮಧ್ಯಾಹ್ನ 12 ಗಂಟೆಗೆ ಪೋಲಿಸ್ ಅಧಿಕ್ಷಕರ ಕಚೇರಿ, ಕರ್ನಾಟಕ ಲೋಕಾಯುಕ್ತ, ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡ, ಮೊದಲನೇ ಮಹಡಿ, ಹಾಸನ ಇಲ್ಲಿ ಬಹಿರಂಗ ಹರಾಜು ಮಾಡಲಾಗುತ್ತದೆ.

ಯಶಸ್ವಿ ಖರೀದಾರರು ಹಣವನ್ನು ನಗದು ರೂಪದಲ್ಲಿ ಪಾವತಿಸಿ ಅವರ ಸ್ವಂತ ಖರ್ಚಿನಲ್ಲಿ ತೆಗೆದುಕೊಂಡು ಹೋಗುವುದು. ಹರಾಜಿನಲ್ಲಿ ಬಿಡ್ಡನ್ನು ಯಾವುದೇ ಕಾರಣಕ್ಕಾಗಿ ರದ್ದು ಮಾಡುವ ಇಲ್ಲದೆ ತಿರಸ್ಕರಿಸುವ ಅಧಿಕಾರವನ್ನು ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನರವರು ಹೊಂದಿರುತ್ತಾರೆ ಮತ್ತು ಇವರ ತೀರ್ಮಾನವೇ ಅಂತಿಮ ತೀರ್ಮಾನವೇ ಅಂತಿಮ ತೀರ್ಮಾನವಾಗಿದೆ.

ವಿವರಗಳಿಗೆ ಕಚೇರಿಯ ದೂ, ಸಂಖ್ಯೆ 08172-295198ಗೆ ಅಥವಾ ಪೋಲಿಸ್ ಅಧಿಕ್ಷಕರು, ಕರ್ನಾಟಕ ಲೋಕಾಯುಕ್ತ ಕಚೇರಿ ಸಂಪರ್ಕಿಸಿ.

## ಮಕ್ಕಳು ಪಾಠ ಪ್ರವಚನಕ್ಕಷ್ಟೇ ಸೀಮಿತವಾಗಬಾರದು: ಶಾಸಕ ಸಿ.ಎನ್.ಬಾಲಕೃಷ್ಣ ಕಿವಿಮಾತು

# ವಿದ್ಯಾರ್ಥಿಗಳಿಗೆ ಪ್ರಾಪಂಚಿಕ ಜ್ಞಾನವೂ ಅತ್ಯಗತ್ಯ

ಚನ್ನರಾಯಪಟ್ಟಣ: ಶಾಲಾ-ಕಾಲೇಜು ಓದುವ ವಿದ್ಯಾರ್ಥಿಗಳಲ್ಲಿ ವ್ಯಾಪಾರ ವಹಿವಾಟು, ಹಣದ ಲೆಕ್ಕಾಚಾರ, ಮಾರುಕಟ್ಟೆಯಲ್ಲಿ ಆಹಾರ ಪದಾರ್ಥಗಳ ಬೆಲೆ ಇನ್ನಿತರೆ ವಿಚಾರಗಳು ತಿಳಿದುಕೊಳ್ಳುವ ಅಗತ್ಯವಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ನವೋದಯ ಶಾಲೆಯ ಸಭಾಂಗಣದಲ್ಲಿ ನವೋದಯ ವಿದ್ಯಾ ಸಂಘ ಇವರ ಸಹಯೋಗದಲ್ಲಿ ನವೋದಯ ಸಮೂಹ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳಿಂದ ಆಯೋಜಿಸಿದ್ದ ಆಹಾರ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಕ್ಕಳು ನಾಲ್ಕು ಗೋಡೆಗಳ ಮದ್ಯೆ ಪಾಠ ಪ್ರವಚನಕ್ಕೆ ಸೀಮಿತವಾಗಬಾರದು. ಪ್ರಾಪಂಚಿಕ ಜ್ಞಾನ ಅತಿ ಅಗತ್ಯ. ಹಾಗಾಗಿ ಪಠ್ಯ ಚಟುವಟಿಕೆಗಳ ಜತೆಗೆ ಆಹಾರ ಮೇಳವನ್ನು ಹಮ್ಮಿಕೊಂಡಿದ್ದು ಇದರಿಂದ ಮಕ್ಕಳಿಗೆ ತರಕಾರಿ ಹಾಗೂ ಆಹಾರದ ಬಗ್ಗೆಯೂ ವಿಶೇಷ ಆಸಕ್ತಿ ಮೂಡಲಿದೆ ಎಂದು ತಿಳಿಸಿದರು

ಮಕ್ಕಳಿಗೆ ವ್ಯವಹಾರ ಜ್ಞಾನದ ಜೊತೆಗೆ, ಅಡುಗೆ ಮಾಡುವ ಬಗ್ಗೆ ಪ್ರಾಯೋಗಿಕ ತಿಳುವಳಿಕೆ ಮೂಡಿದೆ. ಬಿಡುವಿನ ವೇಳೆಯಲ್ಲಿ ಮನೆಯಲ್ಲಿ ಪೋಷಕರು ಅಡುಗೆ ಮಾಡುವಾಗ ಮಕ್ಕಳು ಸಹಾಯ ಮಾಡುವ ಮನೋಭಾವ ಬೆಳೆಯುತ್ತದೆ. ಮಕ್ಕಳಲ್ಲಿ ಲೆಕ್ಕಾಚಾರ ಹಾಗೂ ಸಾಮಾನ್ಯ ಜ್ಞಾನದ ಬಗ್ಗೆ ಅರಿವು ಮೂಡಿಸಲು ಇದು ಸಹಕಾರಿಯಾಗಿದೆ. ಆಹಾರ ಪದಾರ್ಥಗಳ ತಯಾರಿಕೆ, ಮಾರಾಟ, ಲಾಭ, ನಷ್ಟ, ಆಹಾರ ಪದ್ಧತಿ ಹಾಗೂ ಶುಚಿತ್ವದ ಬಗ್ಗೆ ತಿಳಿವಳಿಕೆ ಮೂಡಿಸಲಿದೆ. ಕಲಿಕೆಗೆ ಪೂರಕ ವಾತಾವರಣ ನಿರ್ಮಾಣವಾಗಲಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಆಹಾರದಲ್ಲಿ ಕಲಬೆರಕೆ ಸಾರ್ವತ್ರಿಕವಾಗಿದ್ದು, ರುಚಿ



ಹೆಚ್ಚಳಕ್ಕೆ ಪೂರಕವಾದ, ವಿಷಕಾರಿ ಅಂಶಗಳಿರುವ, ನಿಷೇಧಿತ ಪದಾರ್ಥಗಳನ್ನು ಬೆರೆಸಿ ಮಾರಾಟ ಮಾಡುವುದು ಒಂದೆಡೆಯಾದರೆ, ಹೋಟೆಲ್, ಬೀದಿ ಬದಿಯ ತಿಂಡಿ ಅಂಗಡಿಗಳಲ್ಲಿ ಗ್ರಾಹಕರನ್ನು ಸೆಳೆಯಲು ಕಲಬೆರಕೆ ನಡೆಯುತ್ತದೆ. ಅದು ಆರೋಗ್ಯಕ್ಕೆ ಮಾರಕ ಎಂಬುದನ್ನರಿತು ಎಚ್ಚೆತ್ತುಕೊಂಡ ಸರ್ಕಾರಗಳು ಕೆಲವು ನಿಷೇಧಿತ ಪದಾರ್ಥ ಬಳಸದಂತೆ ತಡೆಯಲು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯ ಜಾರಿಗೆ ಆದೇಶ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಹೋಟೆಲ್‌ಗಳ ಮೇಲೆ ಅಧಿಕಾರಿಗಳು ನಿಗಾ ಇರಿಸಿ ಕಾನೂನು ಕ್ರಮ ಕೈಗೊಳ್ಳಬೇಕಿದೆ. ಆಹಾರ ಕಲಬೆರಕೆ ಪ್ರಕರಣಗಳನ್ನು ಗಂಭೀರ ವಾಗಿ ಪರಿಗಣಿಸಬೇಕು. ಹಲವು ಮಾರಕ ಕಾಯಿಲೆಗಳಿಗೆ ಆಹಾರ ಕಲಬೆರಕೆ ಪ್ರಮುಖ ಕಾರಣವಾಗಿದೆ. ಬಹುಪಾಲು ರೋಗಗಳಿಗೆ ಕಾರಣ ಕಲಬೆರಕೆ ಆಹಾರ ಸೇವನೆ. ಈ ಬಗ್ಗೆ ಜಾಗೃತಿ ವಹಿಸಲು ಶಾಸಕ ಸಿ.ಎನ್. ಬಾಲಕೃಷ್ಣ ಮನವಿ ಮಾಡಿದರು.

ಆಹಾರ ಮೇಳದಲ್ಲಿ ಫಾಸ್ಟ್ ಫುಡ್ ತಿನಿಸುಗಳಿಂದ ಮೊದಲುಗೊಂಡು ವಿವಿಧ ಬಗೆಯ ಹಣ್ಣುಗಳ ಜ್ಯೂಸ್ ಅಂಗಡಿಗಳು, ಮಂಡಾಳು ಒಗ್ಗರಣೆ, ಮಿರ್ಚಿ ಬಜ್ಜಿ, ಬದನೆಕಾಯಿ ಬಜ್ಜಿ, ಗೋಬಿ ಮಂಚೂರಿ, ನೂಡಲ್ಸ್, ಸ್ವೀಟ್ಸ್, ನಾನಾ ಬಗೆಯ ಹಪ್ಪಳ, ಸಂಡಿಗೆ ಸೇರಿದಂತೆ ನಾಡಿನ ನಾನಾ ಭಾಗದಲ್ಲಿನ ತಿಂಡಿ ತಿನಿಸುಗಳು ಒಂದೇ ಸೂರಿನಡಿ ಜನರಿಗೆ ಲಭ್ಯವಾಗುವಂತೆ ವ್ಯವಸ್ಥೆಗೊಳಿಸಲಾಗಿತ್ತು. ಆಹಾರ ಮೇಳದ ಮಳಿಗೆಗಳಲ್ಲಿ ಮಕ್ಕಳು ತಿಂಡಿ ತಿನಿಸುಗಳಿಗೆ ಮುಗಿಬಿದ್ದು ಸೇವಿಸಿ ಸಂಭ್ರಮಿಸಿದರು.

ತಹಶೀಲ್ದಾರ್ ಜಿ.ಎಸ್.ಶಂಕರಪ್ಪ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಕೆ.ಎನ್.ಅನಿಲ್, ನವೋದಯ ವಿದ್ಯಾ ಸಂಸ್ಥೆ ಸಂಘದ ಅಧ್ಯಕ್ಷ ಸಿ.ಜೆ. ಮಂಜುನಾಥ್, ಗೌರವಾಧ್ಯಕ್ಷ ಸಿ.ಎಸ್.ಶೇಷಶಯನ, ಉಪಾಧ್ಯಕ್ಷ ಡಾ.ಎಸ್.ಪ್ರಮೋದ್, ಕಾರ್ಯದರ್ಶಿ ಕೆ.ಪಿ.ಶರತ್, ಕೋಶಾಧ್ಯಕ್ಷ ಜಲೇಂದ್ರ ಕುಮಾರ್, ನಿರ್ದೇಶಕ ಆನಂದ್ ಕಾಳೇನಹಳ್ಳಿ ಸೇರಿದಂತೆ ಸಂಸ್ಥೆಯ ಬೋಧಕ -ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

## ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ನೋಡಲ್ ಕೇಂದ್ರದ ವ್ಯಾಪ್ತಿಯ 66/11 ಕೆ.ವಿ.ವಿ.ವಿ ಕೇಂದ್ರ ಹಳ್ಳಿಮೈಸೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ ಹಳ್ಳಿಮೈಸೂರು, ತಾತನಹಳ್ಳಿ, ಕಲ್ಲಹಳ್ಳಿ, ತೇಜೂರು, ಗುಡ್ಡೇನಹಳ್ಳಿ, ಹಾಡ್ಯ, ದೇವರಗುಡ್ಡೇನಹಳ್ಳಿ, ಮಂಗಳವಾಡಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಫೆ.07 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ ವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಈ ಸಂಬಂಧ ಸಾರ್ವಜನಿಕರು ಸಹಕರಿಸುವಂತೆ ಎಂದು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

# 6ನೇ ಬಾರಿ ಪ್ರಶಸ್ತಿ ಗೆದ್ದ ಭಾರತ ಯುವ ಪಡೆ

## ವೈಭವ್ ಸೂರ್ಯವಂಶಿ ಸ್ಫೋಟಕ ಶತಕ | ಕಾಲೆಬ್ ಫಾಲ್ಕನರ್ ಆಟ ವ್ಯರ್ಥ




• ಪ್ರಜೋದಯ ವರದಿ

**ಹರಾರೆ:** 19 ವರ್ಷದೊಳಗಿನವರ ಐಸಿಸಿ ಏಕದಿನ ವಿಶ್ವಕಪ್ ಫೈನಲ್ ಅನ್ನು ಭಾರತ ಯುವಪಡೆ 100 ರನ್‌ಗಳಿಂದ ಗೆಲ್ಲುವ ಮೂಲಕ 6ನೇ ಭಾರಿ ಪ್ರಶಸ್ತಿ ಗೆದ್ದ ಸಾಧನೆ ಮಾಡಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡಕ್ಕೆ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ಮೂಲಕ ತಂಡಕ್ಕೆ ಆಸರೆಯಾದರು. ಅವರು, 80 ಎಸೆತಗಳಲ್ಲಿ 15 ಬೌಂಡರಿ ಹಾಗೂ 15 ಸಿಕ್ಸರ್ ಸಹಿತ 175 ರನ್ ಕಲೆಹಾಕಿದರು.

ವೈಭವ್ ಸೂರ್ಯವಂಶಿ ಜೊತೆ ನಾಯಕ ಆಯುಷ್ ಮ್ಹಾತ್ರೆ (53), ವೇದಾಂತ್ ತ್ರಿವೇದಿ (30) ಹಾಗೂ ಅಭಿಗ್ಯಾನ್ ಕುಂದು (40) ರನ್ ಗಳಿಸುವ ಮೂಲಕ ತಂಡದ ಮೊತ್ತವನ್ನು 400ರ ಗಡಿ ದಾಟಿಸಿದರು. ಜೇಮ್ಸ್ ಮಿಂಟೊ ಇಂಗ್ಲೆಂಡ್ ಪರ ಮೂರು ವಿಕೆಟ್ ಪಡೆದರು.

411 ರನ್‌ಗಳ ಬೃಹತ್ ಗುರಿ ಬೆನ್ನ ಟ್ಟಿದ ಇಂಗ್ಲೆಂಡ್ ತಂಡಕ್ಕೆ ಆರಂಭಿಕ ಬ್ಯಾಟರ್ ಬೆನ್ ಡಾವ್‌ಕಿನ್ಸ್ (66) ಹಾಗೂ ಮಧ್ಯಮ ಕ್ರಮಾಂಕದ ಬ್ಯಾಟರ್ ಕಾಲೆಬ್ ಫಾಲ್ಕನರ್ (115 ರನ್) ಗಳಿಸುವ ಮೂಲಕ ಹೋರಾಟ ನಡೆಸಿದರಾದರೂ, ಭಾರತ ನೀಡಿದ್ದ ಬೃಹತ್ ಗುರಿ ತಲುಪಲು ವಿಫಲ ವಾಗಿ, 100 ರನ್‌ಗಳ ಸೋಲು ಅನುಭವಿಸಿದರು.

ಬೆನ್ ಡಾಕಿನ್ಸ್ ಉತ್ತಮ ಬ್ಯಾಟಿಂಗ್ ಮಾಡಿ 66 ರನ್ ಕಲೆ ಹಾಕಿದರು. ಬೆನ್ ಮೇಯಸ್ 45, ಥಾಮಸ್ ರೆವ್ 31 ರನ್ ಕಲೆ ಹಾಕಿದರು.

ಭಾರತದ ಪರ ಅಂಬರೀಶ್ 3, ದೀಪೇಶ್ ದೇವೇಂದ್ರನ್, ಕನಿಷ್ಕ ಚೌಹಾನ್ ತಲಾ 2 ವಿಕೆಟ್, ಕಿಲಾನ್ ಪಟೇಲ್ ಮತ್ತು ಆಯೂಶ್ ಮಾತ್ರೆ ತಲಾ 1 ವಿಕೆಟ್ ಪಡೆದಿದ್ದಾರೆ.

### ಇಂಗ್ಲೆಂಡ್ ವಿರುದ್ಧ ದಾಖಲೆ



ಹರಾರೆ: 19 ವರ್ಷದೊಳಗಿನವರ ಏಕದಿನ ವಿಶ್ವಕಪ್‌ನಲ್ಲಿ ಭಾರತ ಕ್ರಿಕೆಟ್ ತಂಡದ ತಾರೆ ವೈಭವ್ ಸೂರ್ಯವಂಶಿ ಸ್ಫೋಟಕ ಶತಕ ಸಿಡಿಸಿ ಮಿಂಚಿದ್ದಾರೆ. ಇಂಗ್ಲೆಂಡ್ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಅವರು ಅಂಡರ್ 19 ವಿಶ್ವಕಪ್ ಇತಿಹಾಸದಲ್ಲಿ 2ನೇ ಅತೀ ವೇಗದ ಶತಕ ಸಿಡಿಸಿದ ದಾಖಲೆ ಬರೆದರು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ಭಾರತ ತಂಡದ ನಾಯಕನ ನಿರ್ಧಾರವನ್ನು ಸಮರ್ಥಿಸಿಕೊಂಡ ವೈಭವ್, ಆರಂಭದಲ್ಲಿ ನಿಧಾನ ಗತಿಯ ಬ್ಯಾಟಿಂಗ್ ಆರಂಭಿಸಿದರು. ಆದರೆ, ಅಂತಿಮವಾಗಿ ಕೇವಲ 55 ಎಸೆತಗಳಲ್ಲಿ ಶತಕ ಸಿಡಿಸಿದರು. ಆ ಮೂಲಕ 19 ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ಅತೀ ವೇಗದ ಶತಕ ಸಿಡಿಸಿದ 1ನೇ ಬ್ಯಾಟರ್ ಎಂಬ ದಾಖಲೆಯನ್ನು ತಮ್ಮ ಹೆಸರಿಗೆ ದಾಖಲಿಸಿಕೊಂಡರು. ಅಂತಿಮವಾಗಿ ಅವರು, 80 ಎಸೆತಗಳಲ್ಲಿ 15 ಬೌಂಡರಿ ಹಾಗೂ 15ಸಿಕ್ಸರ್ ಸಹಿತ 175 ರನ್ ಸಿಡಿಸಿ ಔಟ್ ಆದರು.

ಅಂಡರ್ 19 ವಿಶ್ವಕಪ್‌ನಲ್ಲಿ ಅತೀ ವೇಗದ ಶತಕ ಸಿಡಿಸಿದವರು
ವಿಲ್ ಮಲಜಕ್ (ಆಸ್ಟ್ರೇಲಿಯಾ) ಜಪಾನ್ ವಿರುದ್ಧ ಪರ 51 ಎಸೆತಗಳು
ವೈಭವ್ ಸೂರ್ಯವಂಶಿ (ಭಾರತ) ಇಂಗ್ಲೆಂಡ್ ವಿರುದ್ಧ 55 ಎಸೆತಗಳು
ಖಾಸಿಂ ಅಕ್ರಮ್ (ಪಾಕಿಸ್ತಾನ) ಶ್ರೀಲಂಕಾ ವಿರುದ್ಧ 63 ಎಸೆತಗಳು
ಬೆನ್ ಮೇಯ್ಸ್ (ಇಂಗ್ಲೆಂಡ್) ಸ್ಕಾಟ್‌ಲ್ಯಾಂಡ್ ವಿರುದ್ಧ 65 ಎಸೆತಗಳು
ರಾಜ್ ಬಾವ (ಭಾರತ) ಉಗಾಂಡ ವಿರುದ್ಧ 69 ಎಸೆತಗಳು

## ದೇಶಿ ಜಾನುವಾರುಗಳ ಉಳಿವಿಗೆ ಪ್ರೋತ್ಸಾಹ ಅಗತ್ಯ

» ಮೊದಲನೇ ಪುಟದಿಂದ

ನಾವು ಎಚ್ಚೆತ್ತು ದೇಸಿ ತಳಿ ರಾಸುಗಳ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿದರು.

ಕೊರೊನಾ, ಗಂಟುರೋಗ ಮತ್ತು ಕಾಲುಬಾಯಿ ರೋಗದ ಹಿನ್ನಲೆಯಲ್ಲಿ ಏಳು ವರ್ಷಗಳಿಂದ ಸ್ಥಗಿತಗೊಳಿಸಿದ ದನಗಳ ಜಾತ್ರೆ ಯನ್ನು ರೈತ ಮುಖಂಡರ ಮನವಿಯಂತೆ ಪುರಸಭೆ ವತಿಯಿಂದ ಜಾತ್ರೆಗೆ ಕಳೆದ ವರ್ಷದಿಂದ ಚಾಲನೆ ನೀಡಲಾಗಿದೆ. ದನಗಳ ಜಾತ್ರೆ ಈ ಬಾರಿ ಸಣ್ಣ ಪ್ರಮಾಣದಲ್ಲಾದರೂ ಮುಂದಿನ ವರ್ಷ ಎಲ್ಲಾ ರೈತರ ಸಹಕಾರದೊಂದಿಗೆ ದೊಡ್ಡ ಪ್ರಮಾಣದಲ್ಲಿ ನಡೆಸಲಾಗುವುದು. ಎಪಿಎಂಸಿ ಆವರಣದಲ್ಲಿ ದನಗಳ ಜಾತ್ರೆಗೆ ಸಕಲ ಸಿದ್ಧತೆ ಮಾಡಿ ಕೊಂಡಿದ್ದು, ವಿದ್ಯುತ್ ದೀಪ, ರಾಸುಗಳಿಗೆ ಕುಡಿಯುವ ನೀರು, ಮೇವು, ಶುಚಿತ್ವ ಸೇರಿ ಶಾಂತಿ ಸುವ್ಯವಸ್ಥೆ ಕಾಪಾಡಲು ಪೊಲೀಸ್ ಭದ್ರತೆ ಸೇರಿ ಅಗತ್ಯಕ್ರಮಕ್ಕೆಗೊಳ್ಳಲಾಗಿದೆ ಎಂದರು.

ಫೆ.13ರವರೆಗೆ ದನಗಳ ಜಾತ್ರೆ ನಡೆಯಲಿದ್ದು, ಬೇರೆ ಜಿಲ್ಲೆಗಳಿಂದಲೂ ದನಗಳ ಆಗಮನವಾಗಿದ್ದು, ಉತ್ತಮವಾದ ರಾಸುಗಳಿಗೆ ಎಪಿಎಂಸಿ ಮತ್ತು ಪುರಸಭೆ ವತಿಯಿಂದ ಆಯ್ಕೆ ತಂಡ ಸೂಚಿಸಿದ 18 ಜೋಡಿಗಳಿಗೆ ಬಹುಮಾನಗಳನ್ನು ನೀಡಲಾಗುವುದು. ಫೆ.13ರಂದು ಎಪಿಎಂಸಿ ಆವರಣದ ನಡೆಯುವ ಸಮಾರೋಪ ಸಮಾರಂಭದಲ್ಲಿ ರಾಸುಗಳಿಗೆ ಬಹುಮಾನ ವಿತರಣೆ ಮಾಡಲಾಗುವುದೆಂದು ತಿಳಿಸಿದರು.

ಪುರಸಭಾ ಮುಂಭಾಗದಿಂದ ಆರಂಭಗೊಂಡ ರಾಸುಗಳ ಮೆರವಣಿಗೆಗೆ ಶಾಸಕ ಸಿ.ಎನ್. ಬಾಲಕೃಷ್ಣ ಸೇರಿ ಗಣ್ಯರು ಗೋ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಮಂಗಳ ವಾದ್ಯದೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ರಾಸುಗಳ ಮೆರವಣಿಗೆ ನಡೆಸಿ, ಎಪಿಎಂಸಿ ಆವರಣದಲ್ಲಿ ದನಗಳ ಜಾತ್ರೆ ನಡೆಯುವ ಸ್ಥಳಕ್ಕೆ ಕರೆತರಲಾಯಿತು. ಹಾಸನ ಜಿಲ್ಲೆ ಮಾತ್ರವಲ್ಲದೇ ಹೊರ ಜಿಲ್ಲೆಗಳಿಂದಲೂ ರೈತರು ರಾಸುಗಳನ್ನು ಕರೆತಂದು ರಾಸುಗಳ ಕೊಂಬಿಗೆ ಹೂವುಗಳನ್ನು ಕಟ್ಟಿ ಸಿಂಗರಿಸಲಾಗಿತು.

ಪುರಸಭಾ ಮಾಜಿ ಅಧ್ಯಕ್ಷ ಸಿ.ಎನ್. ಮೋಹನ್, ಮುಖ್ಯಾಧಿಕಾರಿ ಆರ್.ಯತೀಶ್‌ಕುಮಾರ್, ಎಪಿಎಂಸಿ ಕಾರ್ಯದರ್ಶಿ ಸೋಮಶೇಖರ್, ಟಿಎಪಿಸಿಎಂಎಸ್‌ನ ಅಧ್ಯಕ್ಷ ವೆಂಕಟೇಶ ಮೂರ್ತಿ, ನಿರ್ದೇಶಕ ಎಂ.ಆರ್. ಅನಿಲ್, ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಬಿ.ಆರ್.ಯುವರಾಜ್, ರೈತ ಸಂಘದ ಅಧ್ಯಕ್ಷ ರವಿಗೌಡಯ್ಯ, ಮುಖಂಡ ರಾದ ರವಿ, ಗಾರೆಕೃಷ್ಣ, ಅಧಿಕಾರಿಗಳು ಇತರರಿದ್ದರು.

## ಚೀಟಿ ಹಣ ಕೊಡದಿದ್ದಕ್ಕೆ ವಿಷ ಸೇವಿಸಿ ಆತ್ಮಹತ್ಯೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಚೀಟಿ ಹಣ ಕೊಡದೆ ಸತಾಯಿಸಿದ್ದಲ್ಲದೆ ವಾಪಾಸ್ ಹಣ ಕೊಡುವಂತೆ ಬೆದರಿಸಿ ನಿಂದಿಸಿದ್ದಕ್ಕೆ ಮನನೊಂದ ವ್ಯಕ್ತಿ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ರಾಮು (38) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಚನ್ನರಾಯ ಪಟ್ಟಣದಲ್ಲಿ ಹಲವು ವರ್ಷಗಳಿಂದ ವ್ಯಾಪಾರ ಮಾಡಿಕೊಂಡಿದ್ದ ರಾಮು ಪರಿಚಯಸ್ಥರಾದ ಗಿರೀಶ್, ರಾಣಿ ಮತ್ತು ಪುಷ್ಪ ಎಂಬುವವರೊಟ್ಟಿಗೆ ಆರ್ಥಿಕ ವ್ಯವಹಾರ ಇಟ್ಟುಕೊಂಡಿ ದ್ದರು. 15 ಲಕ್ಷ ರೂ. ಮೊತ್ತದ ಚೀಟಿ ನಡೆಸುತ್ತಿದ್ದರು ಎನ್ನಲಾಗಿದೆ. ಎರಡೂವರೆ ವರ್ಷಗಳಿಂದ ಚೀಟಿ ಹಣವನ್ನು ರಾಮು ನಗದು ಹಾಗು ಯುಪಿಐ ಮೂಲಕ ನಿಯಮಿತವಾಗಿ ಪಾವತಿಸುತ್ತಿದ್ದರು. 2025ರ ನ. 25 ರಂದು 15 ಲಕ್ಷ ರೂ. ಚೀಟಿಯನ್ನು 2.70 ಲಕ್ಷ ರೂ.ಗೆ ಕೂಗಿದ್ದರು. ಅದರಲ್ಲಿ 1 ಲಕ್ಷ ರೂ.ಗಳನ್ನು ನಗದು ರೂಪದಲ್ಲಿ ಖಾಲಿ ಚೆಕ್ ಹಾಗು ಬಾಂಡ್ ಪೇಪರ್‌ಗೆ ಸಹಿ ಹಾಕಿಸಿಕೊಂಡು ನ. 25ರಂದು ಕೊಟ್ಟಿದ್ದ ಗಿರೀಶ್, ಪುಷ್ಪ ಹಾಗು ರಾಣಿ ಅವರು ಉಳಿದ 1.70 ಲಕ್ಷ ರೂ. ಕೊಟ್ಟಿರಲಿಲ್ಲ. ಅದನ್ನು ಕೇಳಲು ಹೋದಾಗ ನೀವೇ 10 ಲಕ್ಷ ರೂ. ಕೊಡಬೇಕೆಂದು ಎಚ್ಚರಿಕೆ ನೀಡಿದ್ದರು. 20 ದಿನಗಳ ಹಿಂದೆ ರಾಮು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಬಂದಿದ್ದ ಅವರು ಗಲಾಟೆ ಮಾಡಿ ಬ್ಯಾಂಕ್‌ನಲ್ಲಿ ಅಡವಿಟ್ಟಿರುವ ಒಡವೆ ಚೀಟಿಯನ್ನು ಕಿತ್ತುಕೊಂಡು, ಅವಾಚ್ಯ ಶಬ್ದಗಳಿಂದ ನಿಂದಿಸಿ ಹಣ ಕೊಡದಿದ್ದರೆ ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿದ್ದರು ಎನ್ನಲಾಗಿದೆ.

ಈ ಅವಮಾನದಿಂದ ಮನನೊಂದ ರಾಮು ಗುರುವಾರ ಜಮೀನಿನಲ್ಲಿ ವಿಷ ಸೇವಿಸಿ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನೀರಿನ ಟ್ಯಾಂಕ್, ರಸ್ತೆ ಕಾಮಗಾರಿಗೆ ಚಾಲನೆ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಅಗಲಹಳ್ಳಿ ಜೆಜೆಎಂ ನೀರಿನ ಟ್ಯಾಂಕ್ ಹಾಗು ಸಾಣೆನಹಳ್ಳಿ ಗ್ರಾಮಗಳಲ್ಲಿ 15 ಲಕ್ಷ ರೂ. ವೆಚ್ಚದ ರಸ್ತೆ ಕಾಮಗಾರಿಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಶೀಘ್ರವಾಗಿ ಕಾಮಗಾರಿ ಮುಗಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು. ಗುತ್ತಿಗೆದಾರರು ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳ ಬೇಕೆಂದು ಸೂಚನೆ ನೀಡಿದರು. ಗ್ರಾಮದ ಮುಖಂಡರು, ಅಧಿಕಾರಿಗಳು ಹಾಜರಿದ್ದರು.

## ಪೌಷ್ಟಿಕ ಆಹಾರದಿಂದ ಮಕ್ಕಳ ಆರೋಗ್ಯ ಸದೃಢ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಸರ್ಕಾರವು ಪಿಎಂ ಪೋಷಣ್ ಅಭಿಯಾನದಡಿ ಸರ್ಕಾರಿ ಶಾಲಾ ಮಕ್ಕಳಿಗೆ ಪೂರಕವಾದ ಪೌಷ್ಟಿಕ ಆಹಾರ, ಹಾಲು, ಬಿಸಿಯೂಟ, ರಾಗಿ ಮಾಲ್ಟ್ ನೀಡಲಾಗುತ್ತಿದೆ ಎಂದು ಪಿಎಂ ಪೋಷಣ್ ಅಭಿಯಾನದ ಸಹಾಯಕ ನಿರ್ದೇಶಕ ಉಮಾಶಂಕರ್ ಅವರು ಹೇಳಿದರು.

ತಾಲ್ಲೂಕಿನ ಮೂಕೀಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ಪೋಷನ್ ಮಾಸಾಚಾರಣೆಯ ಪ್ರಯುಕ್ತ ಶಾಲೆಯ ಪೋಷಕರಿಗೆ ಏರ್ಪಡಿಸಿದ್ದ ಬೆಂಕಿ ರಹಿತ ಅಡುಗೆ ತಯಾರಿಸುವ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿ, ಇದರಿಂದ ಮಕ್ಕಳು ದೈಹಿಕ ಮತ್ತು ಮಾನಸಿಕವಾಗಿ ಸದೃಡವಾಗಲು ಸಹಕಾರಿಯಾಗಲಿದೆ ಎಂದರು.

ಪಾಲಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಿ ಗುಣ ಮಟ್ಟದ ಶಿಕ್ಷಣ ಕಲ್ಪಿಸುವಲ್ಲಿ ಮುಂದಾಗಬೇಕು. ಸರ್ಕಾರಿ ಶಾಲೆಗಳಲ್ಲಿ ಉಚಿತ ಶಿಕ್ಷಣದ ಜೊತೆಗೆ ಸಿಗುವ ಎಲ್ಲಾ ಸೌಲಭ್ಯ ಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಶಿಕ್ಷಣ ಸಂಯೋಜಕ ಶ್ರೀನಿವಾಸ್ ಅವರು ಮಾತನಾಡಿ, ಸರ್ಕಾರಿ ಶಾಲೆಗಳ ಬಲವರ್ಧನೆಗೆ ಇಲಾಖೆ ಕೈಗೊಂಡಿರುವ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಬೆಂಕಿ ರಹಿತ ಅಡುಗೆ ತಯಾರಿಸುವ ಸ್ಪರ್ಧೆಯಲ್ಲಿ ಮಾನಸ ಪ್ರಥಮ ಸ್ಥಾನ, ಮಣಿ ದ್ವಿತೀಯ ಸ್ಥಾನ ಹಾಗೂ ವೀಣಾ ತೃತೀಯ ಸ್ಥಾನಕ್ಕೆ ಬಾಜನರಾಗಿದ್ದು ಬಹುಮಾನ ಪಡೆದರು.

ದಿಡಗ ಸರ್ಕಾರಿ ಆರೋಗ್ಯ ಕೇಂದ್ರದ ಹಿರಿಯ ಸುರಕ್ಷಿಣಾ ಅಧಿಕಾರಿ ಸರೋಜಮ್ಮ, ಕಿರಿಯ ಸುರಕ್ಷಣಾ ಅಧಿಕಾರಿ ಪುಷ್ಪಲತಾ, ಎಸ್‌ಡಿಎಂಸಿ ಅಧ್ಯಕ್ಷ ಮಣಿ, ಉಪಾಧ್ಯಕ್ಷ ಮೋಹನ್ ಕುಮಾರ್, ಶಾಲೆಯ ಮುಖ್ಯಶಿಕ್ಷಕ ಶ್ರೀಕಾಂತ್, ಸಹ ಶಿಕ್ಷಕರಾದ ಕೆಂಪೇಗೌಡ, ಸೌಮ್ಯ, ರಮ್ಯ, ಪೋಷಕರು, ಶಾಲೆಯ ಹಿರಿಯ ವಿದ್ಯಾರ್ಥಿಗಳು ಹಾಗೂ ಇತರರು ಭಾಗವಹಿಸಿದ್ದರು.

## ರಸ್ತೆ ಅಪಘಾತ: ರಾಜ್ಯದಲ್ಲೇ ಜಿಲ್ಲೆಗೆ 4ನೇ ಸ್ಥಾನ

» ಮೊದಲನೇ ಪುಟದಿಂದ

ಹಾಗು ನಂತರದ ಸ್ಥಾನದಲ್ಲಿ ಹಾಸನಜಿಲ್ಲೆ ಸ್ಥಾನ ಪಡೆದು ಕೊಂಡಿದೆ. ಹಾಗಾಗಿ ಜಿಲ್ಲೆಯಲ್ಲಿ ಅಪಘಾತ, ಸಾವು-ನೋವು ಪ್ರಮಾಣ ಗಣನೀ ಯವಾಗಿ ಇಳಿಕೆ ಮಾಡ ಬೇಕೆಂದು ಸಂಚಾರ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವ ಕೆಲಸ ಪ್ರಾದೇಶಿಕ ಸಾರಿಗೆ ಇಲಾಖೆ ಹಾಗು ಸಂಚಾರಿ ಪೊಲೀಸರಿಂದ ನಡೆಯುತ್ತಿದೆ.

ಸಂಚಾರ ಸುರಕ್ಷತೆಯ ಅರಿವು ಮೂಡಿಸಲು ಜನವರಿ ತಿಂಗಳಲ್ಲಿ ವಿನೂತನವಾಗಿ ಹಾಡಿನ ಮೂಲಕ ಜಾಗೃತಿ, ನ್ಯಾಯಾಲಯದಲ್ಲಿ ಸೆಲ್ಫಿ ಸ್ಟ್ಯಾಂಡ್, ಸಾರ್ವಜನಿಕ ಸ್ಥಳದಲ್ಲಿ ಜಾಥಾ ಸೇರಿ ಹಲವು ಕಾರ್ಯಕ್ರಮಗಳನ್ನು ನಡೆಸಲಾಗಿದೆ.

**ಬ್ಲಾಕ್‌ಸ್ಪಾಟ್ ಗುರುತು**

ಅಪಘಾತ ಸ್ಥಳಗಳನ್ನು ಬ್ಲಾಕ್‌ಸ್ಪಾಟ್ ಎಂದು ಗುರುತಿಸಿ, ಮರುಕಳಿಸ ದಂತೆ ಸೈನ್ ಬೋರ್ಡ್, ಗುಂಡಿ ಬಿದ್ದಿದ್ದರೆ ಮುಚ್ಚಿಸುವುದು, ರಸ್ತೆ ಬದಿ ಮರಗಳ ಕೊಂಬೆ ತೆರವು ಗೊಳಿಸು ವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮದ್ಯ ಸೇವನೆ ಮಾಡಿ ವಾಹನಗಳ ಚಾಲನೆಯಿಂದ ಅಪ ಘಾತ ಹೆಚ್ಚಳವಾಗುತ್ತಿದೆಂಬ ಸಂಗತಿಯನ್ನು ಮನಗಂಡು ತಪ್ಪಿತಸ್ಥರಿಗೆ ದಂಡ, ವಾಹನ ವಶ ಇತ್ಯಾದಿ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಚಾರ ನಿಯಮ ಪಾಲನೆ, ಹೆಲ್ಮೆಟ್ ಕಡ್ಡಾಯ, ಅಪ್ರಾಪ್ತರಿಗೆ ವಾಹನ ನೀಡಿದರೆ ಹಾಕಬಹುದಾದ ದಂಡದ ಪ್ರಮಾಣ ಹಾಗು ಶಿಕ್ಷೆಯ ಬಗ್ಗೆಯೂ ಜಾಗೃತಿ ಮೂಡಿಸಲಾಗುತ್ತಿದೆ. ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆಗಳ ಆಟೋ ಟಿಪ್ಪರ್‌ಗಳಲ್ಲಿಯೂ ಹಾಡಿನ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

**76.47 ಲ.ರೂ. ದಂಡ ವಸೂಲಿ**

ಕಳೆದ ಒಂದು ವರ್ಷದಲ್ಲಿ ಸಂಚಾರ ನಿಯ ಮ ಉಲ್ಲಂಘನೆಯಲ್ಲಿ 76.47 ಲ.ರೂ. ದಂಡ ವಸೂಲಿ ಮಾಡಿದ್ದರೆ, ಎಫ್‌ಸಿ ನವೀಕರಣ ಮತ್ತಿತರ ಪ್ರಕರಣ ಸೇರಿ ಒಟ್ಟು 1.20 ಕೋ.ರೂ. ಆದಾಯ ಗಳಿಸಲಾಗಿದೆ. ಪ್ರಾದೇಶಿಕ ಸಾರಿಗೆ ಇಲಾಖೆ 210 ಕೋ.ರೂ. ತೆರಿಗೆ ಸಂಗ್ರ ಹದ ಗುರಿ ಹೊಂದಿದ್ದು, 2025ರ ಡಿಸೆಂಬರ್ ಅಂತ್ಯಕ್ಕೆ 132.25 ಕೋ.ರೂ.ತೆರಿಗೆ ಸಂಗ್ರಹ ಮೂಲಕ ಶೇ.84ರಷ್ಟು ಸಾಧನೆ ಮಾಡಿದೆ.

## ಕುಸ್ತಿಪಟು ಸುಶೀಲ್ ಕುಮಾರ್ ಜಾಮೀನು ಅರ್ಜಿ ವಜಾ

• ಪ್ರಜೋದಯ ವರದಿ



**ನವದೆಹಲಿ:** ಇಲ್ಲಿನ ಛತ್ರಸಾಲ್ ಕ್ರೀಡಾಂಗಣದಲ್ಲಿ ಮಾಜಿ ಜೂನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಸಾಗರ್ ಧನಕರ್ ಅವರ ಕೊಲೆ ಪ್ರಕರಣ ಸಂಬಂಧ ಒಲಿಂಪಿಕ್ ಪದಕ ವಿಜೇತ ಸುಶೀಲ್ ಕುಮಾರ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ದೆಹಲಿಯ ರೋಹಿಣಿ ನ್ಯಾಯಾಲಯ ವಜಾಗೊಳಿಸಿದೆ.

2025ರ ಮಾರ್ಚ್ 4ರಂದು ದೆಹಲಿ ಹೈಕೋರ್ಟ್ ಸುಶೀಲ್‌ಗೆ ತಾತ್ಕಾಲಿಕವಾಗಿ ಜಾಮೀನು ಮಂಜೂರು ಮಾಡಿತ್ತು. ಆಗಸ್ಟ್ 13ರಂದು ಸುಶೀಲ್ ಕುಮಾರ್ ಅವರಿಗೆ ನೀಡಲಾಗಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತ್ತು. 2021ರ ಮೇ 4ರಂದು ಸಾಗರ್ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಆರೋಪ ಸುಶೀಲ್ ಕುಮಾರ್ ಮತ್ತು ಇತರರ ಮೇಲೆ ಇದೆ.

## 40 ಲಕ್ಷ ರೂ. ಮೌಲ್ಯದ ಗಾಂಜಾ ನಾಶ



• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ವಿವಿಧೆಡೆ ಪೊಲೀಸರು ದಾಳಿ ನಡೆಸಿ 76 ಪ್ರಕರಣಗಳಲ್ಲಿ ಗಾಂಜಾ ವಶಪಡಿಸಿ ಕೊಂಡಿದ್ದ 127 ಕೆ.ಜಿ, ಅಂದಾಜು 40 ಲಕ್ಷ ರೂ. ಮೌಲ್ಯದ ಗಾಂಜಾವನ್ನು ನಗರ ಹೊರ ವಲಯದ ಕೆಐಎಡಿಬಿ ಸರ್ಕಲ್‌ನಲ್ಲಿರುವ ಸರ್ಕಾರಿ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ನಾಶಪಡಿಸಲಾಯಿತು.

ಎನ್‌ಡಿಪಿಎಸ್ ಆ್ಯಕ್ಟ್‌ನಡಿ ನಗರ ಸೇರಿ ಜಿಲ್ಲೆಯ ಎಂಟು ವಲಯಗಳ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿದ ಪೊಲೀಸರು, 76 ಪ್ರಕರಣಗಳಲ್ಲಿ ಒಟ್ಟು 64 ಕೆಜಿ ಒಣ ಗಾಂಜಾ ಹಾಗು 63 ಕೆಜಿ ಹಸಿ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಬಗ್ಗೆ ಅಬಕಾರಿ ಇಲಾಖೆ ಅಧಿಕಾರಿಗಳು ನ್ಯಾಯಾಲಯದಿಂದ ಅನುಮತಿ ಪಡೆದು ಮೈಸೂರು ವಿಭಾಗದ ಜಂಟಿ ಆಯುಕ್ತ ಬಸವರಾಜು ಅಡಪದ ಅವರ ಸಮ್ಮುಖದಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು ನಾಶಪಡಿಸಿದರು.

## ರಾಜ್ಯ, ರಾಷ್ಟ್ರ ರಾಜಕಾರಣದಲ್ಲಿ ಜಿಲ್ಲೆ ಪ್ರಮುಖ ಪಾತ್ರ ವಹಿಸಲಿದೆ

### ದೇವಿ ಪುರಾಣ ಪಠಣ | ಕಾಲಜ್ಞಾನ ಬ್ರಹ್ಮ ಸದ್ಗುರು ವಿಶ್ವಕಾಲಜ್ಞಾನ ಶಿವಯೋಗಿ

• ಪ್ರಜೋದಯ ವರದಿ



**ಹಾಸನ:** ಬರುವ ದಿನಗಳಲ್ಲಿ ರಾಜ್ಯ ಮಾತ್ರವಲ್ಲದೆ ರಾಷ್ಟ್ರ ರಾಜಕಾರಣದಲ್ಲಿ ದೊಡ್ಡ ಪರಿ ವರ್ತನೆಗಳು ನಡೆಯಲಿವೆ. ಹಾಸನ ಜಿಲ್ಲೆಯೇ ಮತ್ತೆ ರಾಜ್ಯ ಹಾಗು ದೇಶದ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುವ ದಿನಗಳು ದೂರವಿಲ್ಲ ಎಂದು ಕಾಲಜ್ಞಾನ ಬ್ರಹ್ಮ ಸದ್ಗುರು ವಿಶ್ವಕಾಲಜ್ಞಾನ ಶಿವಯೋಗಿ ಅವರು ಹೇಳಿದರು.

ಹಾಸನಾಂಬ ದೇವಾಲಯ ಆವರಣದಲ್ಲಿ ಲೋಕ ಕಲ್ಯಾಣಾರ್ಥವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ದೇವಿ ಪುರಾಣ ಪಠಣ ಹಾಗು ಧರ್ಮಸಭೆಯಲ್ಲಿ ಮಾತನಾಡಿದ ಅವರು, ಬರುವ ದಿನಮಾನಗಳಲ್ಲಿ ಹೊಸ ಇತಿಹಾಸ ನಿರ್ಮಾಣವಾಗಲಿದೆ. ಹಳ್ಳಿ ಹಳ್ಳ ತುಂಬಿ ಹರಿಯುವಾಗ, ಉಳ್ಳವನು ಶಿವಪೂಜೆ ಮಾಡುವಾಗ ಸಂಸರ ನಸಂಗಿ ನಿಸಂಗ ಪರಿತ್ಯಾಗಿ ಅವನೆಯ ಮತ್ತೊಂದು ಸಾರಿ ಹಾಸನದ ಒಳಗ ಕರ್ನಾಟಕದ ಪ್ರಧಾನಿಯೇ ಆಗಬಹುದು. ಮುಖ್ಯಮಂತ್ರಿಯೇ ಆಗಬಹುದು. ಮನೆ ತನಕ್ಕೆ ಅಂಟಿಕೊಂಡಿರುವ ಚುಕ್ಕಿ ಹೊರಗೆ ಹಾಕುತ್ತದೆ ಎಂದರು.

ರಾಜಕೀಯದಲ್ಲಿ ನಾನು ಇದ್ದಿದು ಇದ್ದಾಂಗೆ ಹೇಳುವೆ, ನಾನು ಯಾರ ಬಳಿ ಹಣ ತಿಂದಿಲ್ಲ. ಯಾವ ರಾಜಕಾರಣಿ ನಮ್ಮ ಮಠಕ್ಕೆ ಬಂದರೇ ಛಾಪೆ ಮೇಲೆ ಕೂರಬೇಕು. ಯಾವ ಶಾಸಕ ನನ್ನೂ ಕರೆದು ನಾನು ಮಠದಲ್ಲಿ ಸನ್ಮಾನ ಮಾಡಿಲ್ಲ. ಹಣ ಕೊಡಿ ಎಂದು ಯಾರ ಬಳಿ ಕೈವೊಡ್ಡಿ ಬೇಡಿಲ್ಲ. ನಮ್ಮ ಸಾಮೀಜಿ ಸಾನಿಧ್ಯ ಹೇಗೆ ಇರಬೇಕೆಂದರೇ ರಾಜಕಾರಣಿಗಳಿಗೆ ಆಶೀರ್ವಾದ ಮಾಡಬೇಕು. ಸಮಾಜವನ್ನು ತಿದ್ದಿ ಶುದ್ಧವಾಗಿ ಬದುಕು ಮಾಡುವಂತಹ ಅವರಿಗೆ ಸರಿಯಾಗಿ ನಾವು ಕಲಿಸಬೇಕು. ಅವರಿಂದ ದಕ್ಷಣೆ ಬಯಸುವ ಸ್ವಾಮೀಜಿ ನಾವಾಗ ಬಾರದು ಎಂದರು.

ಕಿಡಿಗಣ್ಣಯ್ಯ ಸ್ವಾಮಿಗಳು ಮಾಡಿದ ಪುಣ್ಯದ ಪ್ರತಿಫಲ ನಿಮ್ಮ ಹಾಸನದಲ್ಲಿ ಸುಹಾಸನೆ ಬೀರುವಂತಹ ಒಂದು ಶಕ್ತಿ ಮತ್ತೆ ಕೆಂಪು ಭಾವುಟ ಹಾರಿಸುವಂತಹ ವ್ಯಕ್ತಿಗಳು ಮತ್ತೆ ಬರುತ್ತಾರೆ. ನಿಮ್ಮ ಹಾಸನ ಚೆಲುವಾಗುತ್ತದೆ. ಕರ್ನಾಟಕದಲ್ಲಿ ಈಗಿರುವ ಕಾಂಗ್ರೆಸ್ ಸರ್ಕಾರ ಎರಡು ವರ್ಷ ನಡೆದುಕೊಂಡು ಹೋಗುತ್ತದೆ. ಕಡಿದು ಕಟ್ಟೋರಿಲ್ಲ, ಕೂರಿಸಿ ಮೇವು ಹಾಕೊರಿಲ್ಲ. ಇದ್ದಿದು ಇದ್ದಾಂಗೆ ಹೇಳಿದರೇ ಯಾರು ಕೇಳೊರಿಲ್ಲ. ಸಿದ್ದರಾಮಯ್ಯ ಅವರು ಉಚಿತ ಬಸ್ ಇತರೆ ಯೋಜನೆ ಮೂಲಕ ಒಳ್ಳೆ ಕೆಲಸ ಕೊಟ್ಟಿದ್ದಾರೆ. ಸಲ್ಪ ವ್ಯತ್ಯಾಸದ ಸಮಯ ಉಂಟು ಎಂದರು.

ರಾಜಕೀಯ ದ್ವೇಷದಲ್ಲಿ ಮತ್ತೆ ಭಿನ್ನ ಮುಂದುವರೆದರೇ ಇನ್ನು ಸುಮಾರು 25 ರಿಂದ 28 ವರ್ಷದ ತನಕ ಈ ನಮ್ಮ ದೇಶವನ್ನು ಅಲುಗಾಡಿಸುವಂತಹ ಶಕ್ತಿ, ವ್ಯಕ್ತಿಗಳು ರಾಜಕೀಯ ಒಳಗೆ ಇವರ ಬಿಟ್ಟರೇ ಇನ್ಯಾರು ಹುಟ್ಟುವುದಿಲ್ಲ. ಸದ್ಯಕ್ಕೆ ಯಾರು ಇಲ್ಲ. ಹೊಸ ಇತಿಹಾಸ ನಿರ್ಮಾಣ ಮಾಡುವ ವ್ಯಕ್ತಿಗಳು ಆಗುತ್ತಾರೆಂದು ತಿಳಿಸಿದರು.

**ಲೋಕ ಕಲ್ಯಾಣಕ್ಕಾಗಿ ಪುರಾಣ ಪಠಣ**

ಲೋಕ ಕಲ್ಯಾಣಕ್ಕಾಗಿ ಹಾಗು ಮಳೆ, ಬೆಳೆ ಸಮೃದ್ಧಿಗಾಗಿ, ಜನಸಾಮಾನ್ಯರ ಸುಖ-ಶಾಂತಿ ನೆಮ್ಮದಿಗಾಗಿ ಸಾಮೂಹಿಕ 108ಕ್ಕೂ ಹೆಚ್ಚು ಜನರು ಶ್ರೀದೇವಿ ಪುರಾಣ ಪಠಣ, ಹೋಮ ನಡೆಸಿದರು.ರಾಯಚೂರಿನ ಉಮಳಿ ಹೊಸುರು ಹಿರೇಮಠದ ಕಿಡಿಗಣ್ಣಯ್ಯ ಮಹಾ ಸ್ವಾಮೀಜಿ ಸೇರಿ ಹಲವು ಮಠಾಧೀಶರು ಭಾಗಿಯಾಗಿದ್ದರು. ಪ್ರಕೃತಿ ಸಮ್ಮಿಲನ, ಉತ್ತಮ ಮಳೆ, ಸಮೃದ್ಧ ಬೆಳೆ, ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ನೆಲೆಯೂರಲಿ ಎಂದು ಎಲ್ಲರೂ ಸೇರಿ ಪ್ರಾರ್ಥಿ ಸಿದರು. ಧಾರ್ಮಿಕ ಮಂತ್ರೋಚ್ಚಾರಣೆ ಯೊಂದಿಗೆ ದೇವಾಲಯದ ವಾತಾವರಣ ಸಂಪೂರ್ಣವಾಗಿ ಆಧ್ಯಾತ್ಮಿಕತೆ ಯಿಂದ ತುಂಬಿ ತುಳುಕಿತ್ತು. ವಿವಿಧ ಮಠಗಳ ಮಠಾಧೀಶರು ಭಾಗಿಯಾಗಿದರು.

## ಶನೈೇಶ್ವರಸ್ವಾಮಿ ದೇವಸ್ಥಾನ ವಾರ್ಷಿಕೋತ್ಸವ




• ಪ್ರಜೋದಯ ವರದಿ

**ಹಾಸನ:** ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿ ಚಗಚಗೆರೆ ಗ್ರಾಮದ ಉದ್ಭವ ಶ್ರೀ ಶನ್ಯೇಶ್ವರಸ್ವಾಮಿ ದೇವ ಸ್ಥಾನದ ವಾರ್ಷಿಕೋತ್ಸವ ಹಾಗು 42ನೇ ವರ್ಷದ ಶಿವರಾತ್ರಿ ಮಹೋ ತ್ಸವ ಫೆ.8 ರಂದು ನಡೆಯಲಿದೆ ಎಂದು ಶ್ರೀಕ್ಷೇತ್ರ ಧರ್ಮಧ್ವಜ ಪ್ರತಿಷ್ಠಾನ ಅಧ್ಯಕ್ಷ ಹೆಚ್. ಎ.ಅನಿಲ್ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ಸವಕ್ಕೆ ಶೃಂಗೇರಿ ಶಾರದಾ ಪೀಠದ ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗ ಹೋಬಳಿಯ ವಿದ್ಯಾಚೌಡೇಶ್ವರಿ ಅಮ್ಮನವರು, ಹಂಗರಹಳ್ಳಿ ಶ್ರೀ ಬಸವಣ್ಣ ದೇವರು ಆಗಮಿಸಲಿವೆ. ಲೋಕ ಕಲ್ಯಾಣಾರ್ಥವಾಗಿ ಕಾರ್ಯಕ್ರಮ ನಡೆಸಲಾಗುತ್ತಿದೆಂದು ಹೇಳಿದರು.

ಭಾನುವಾರ ಬೆಳಿಗ್ಗೆ ದೇವಾಲಯದಿಂದ ಹೊರಟು ಗಂಗೆ ತರುವ ಸ್ಥಳದಲ್ಲಿ ಸುಮಂಗಲಿ ಯರಿಂದ ಗಂಗಾಪೂಜೆ, ಗಂಗಾ ದೇವಿಗೆ ಬಾಗಿನ ಸಮರ್ಪಣೆ ಮಾಡಿ ಮಹಾ ಪ್ರಾರ್ಥನೆ ಸಲ್ಲಿಸಿ 108 ಅಗ್ರೋದಕ ಕಳಶಗಳನ್ನು ಗ್ರಾಮ ಪ್ರದಕ್ಷಿಣೆ ಹಾಗು ಉತ್ಸವದೊಂದಿಗೆ ದೇವಾಲಯಕ್ಕೆ ತರುವುದು. ನಂತರ ಸ್ವಾಮಿಗೆ ಮಹಾರುದ್ರಾಭಿಷೇಕ, ಗಣಪತಿ ಹೋಮ, ನವಗ್ರಹ ಹೋಮ, ಮಹಾ ಮೃತ್ಯುಂಜಯ ಹೋಮ ನಡೆಯಲಿವೆ. ನಂತರ ತೀರ್ಥ ಪ್ರಸಾದ ವಿನಿಯೋಗ ಇದೆ ಎಂದರು.

ಮಧ್ಯಾಹ್ನ 12 ಗಂಟೆಗೆ ಧಾರ್ಮಿಕ ಸಮಾರಂಭ ನಡೆಯಲಿದೆ. ಡಾ.ಶ್ರೀ ಕೃಷ್ಣಮೂರ್ತಿ ಸ್ವಾಮೀಜಿ, ದೈವೈಕ್ಯ ಶ್ರೀ ದೇವರಾಜುಸ್ವಾಮೀಜಿ, ಆನಂದ ಗುರೂಜಿ ಹಾಗು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್‌ಹೆಗ್ಡೆ ಅವರು ಭಾಗವಹಿಸಲಿದ್ದಾರೆ. ಅದೇ ದಿನ ಹಾಸನದ ಅಮ್ಮ ಕಣ್ಣಿನ ಆಸ್ಪತ್ರೆಯ ವೈದ್ಯರಿಂದ ಉಚಿತ ಕಣ್ಣಿನ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಸಮಿತಿಯ ಉದಯ ಕುಮಾರ್, ರಾಜೇಶ್, ಬಸವರಾಜ್, ದೇವರಾಜ್ ಇದ್ದರು.

## ಕಾನೂನು ಬಾಹಿರ ಚಟುವಟಿಕೆಗಳಿಗೆ ಕುಮ್ಮಕ್ಕು

### ಮುರುಳಿ ಮೋಹನ್ ವಿರುದ್ಧ ಸಚಿವರಿಗೆ ದೂರು | ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ

• ಪ್ರಜೋದಯ ವರದಿ




**ಹಾಸನ:** ಸಕಲೇಶಪುರ-ಆಲೂರು ಕ್ಷೇತ್ರದಲ್ಲಿ ನಡೆಯುತ್ತಿರುವ ಕಾನೂನು ಬಾಹಿರ ಚಟು ವಟಿಕೆಗಳಿಗೆ ಕುಮ್ಮಕ್ಕು ನೀಡುತ್ತಿರುವ ಮುರುಳಿ ಮೋಹನ್ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವರಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ದಿನೇಶ್ ಅವರು ಆರೋಪಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡೂವರೆ ವರ್ಷಗಳಿಂದ ಮೀಸಲು ಕ್ಷೇತ್ರದಲ್ಲಿ ಕಾನೂನು ಬಾಹಿರವಾಗಿ ಅಕ್ರಮ ಮರಳು ದಂಧೆ, ಮರ ಸಾಗಣೆ, ಜೂಜು, ಗಾಂಜಾ, ಡ್ರಗ್ಸ್, ಮಟ್ಕಾ ಮಾಫಿಯಾ, ಕ್ರಿಕೆಟ್ ಬೆಟ್ಟಿಂಗ್ ಎಗ್ಗಿಲ್ಲದೇ ನಡೆಯುತ್ತಿದೆ. ಈ ಬಗ್ಗೆ ಸಚಿವರ ನಿರ್ಲಕ್ಷ್ಯ ಹೀಗೆಯೇ ಮುಂದುವರಿದರೆ ಅವರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ತಮಟೆ ಚಳುವಳಿ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ಈ ಎಲ್ಲಾ ಅಕ್ರಮ ದಂಧೆಗಳು ನಿರಂತರವಾಗಿ ನಡೆಯಲು ಕಳೆದ ವಿಧಾನಸಭಾ ಚುನಾವಣೆಯ ಪರಾಜಿತ ಅಭ್ಯರ್ಥಿ ಮುರುಳಿ ಮೋಹನ್ ಅವರೇ ನೇರ ಕಾರಣ. ಅವರು ರಾಜ್ಯದಲ್ಲಿ ನಮ್ಮದೇ ಸರ್ಕಾರ ಇದೇ ಎಂದು ಹೇಳಿಕೊಂಡು ಎಲ್ಲಾ ಅಕ್ರಮಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಈ ಮೂಲಕ ಇಡೀ ವ್ಯವಸ್ಥೆ ಹಾಳು ಮಾಡುತ್ತಿದ್ದಾರೆ. ಯುವಕರು, ಕಾಫಿ ಬೆಳೆಗಾರರ ಮಕ್ಕಳು ವಿವಿಧ ವ್ಯಸನ ಗಳಿಗೆ ದಾಸರಾಗಿ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆಂದು ವಿಷಾದಿಸಿದರು.

ಈ ಎಲ್ಲಾ ಕಾನೂನು ಬಾಹಿರ ಚಟುವಟಿಕೆಗಳಿಗೆ ಪೊಲೀಸರೇ ಸಹಕಾರ ನೀಡುತ್ತಿದ್ದಾರೆ. ತಮ್ಮ ದಂಧೆ ನಡೆಸಲು ಅನುಕೂಲವಾಗುವಂತೆ ಅವರು ತಮಗೆ ಬೇಕಾದ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ಈ ಎಲ್ಲದರ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ಅನೇಕ ಬಾರಿ ದೂರು ನೀಡಿದ್ದೇವೆ. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಇನ್ನಾದರೂ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಿ, ಕ್ಷೇತ್ರದ ಜನರಿಗೆ ನ್ಯಾಯ ಒದಗಿಸಬೇಕು. ಇಲ್ಲದೇ ಇದ್ದರೆ ಸಚಿವರು ಜಿಲ್ಲೆಗೆ ಆಗಮಿಸಿದ ವೇಳೆ ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು. ರೈತ ಮುಖಂಡ ವಿಠಲ, ಮಧು, ಜಗದೀಶ್, ನಾಗರಾಜ್, ಚಂದ್ರು ಇದ್ದರು.

**20 ತಂಡಗಳು ಭಾಗಿ | 7 ತಂಡಗಳು ನೇರ ಅರ್ಹತೆ ಪಡೆದಿವೆ | ಇಂದು ಭಾರತ-ಅಮೇರಿಕಾ ಹಣಾಹಣಿ**

# ಇಂದಿನಿಂದ ಟಿ-20 ವಿಶ್ವಕಪ್ ಪಂದ್ಯಾವಳಿ

• ಪ್ರಜೋದಯ ವರದಿ



**ಮುಂಬೈ:** ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿರುವ 2026ನೇ ಸಾಲಿನ ಟಿ-20 ವಿಶ್ವಕಪ್‌ನಲ್ಲಿ 20 ತಂಡಗಳು ಭಾಗವಹಿಸಲಿವೆ. ಇದುವರೆಗೂ ಐಸಿಸಿ ರ್‍ಯಾಂಕಿಂಗ್ ಆಧಾರದ ಮೇಲೆ 10 ತಂಡಗಳು ಮಾತ್ರ ಭಾಗವಹಿಸುತ್ತಿದ್ದವು. ಆದರೆ, ಇದೇ ಮೊದಲ ಬಾರಿಗೆ ಪ್ರತಿಷ್ಠಿತ ಟೂರ್ನಿಯಲ್ಲಿ 20 ತಂಡಗಳು ಭಾಗವಹಿಸುತ್ತಿವೆ.

ಭಾರತ ಮತ್ತು ಶ್ರೀಲಂಕಾ ತಂಡಗಳು ಆಯೋಜಕರಾಗಿರುವುದರಿಂದ ನೇರ ಅರ್ಹತೆ ಪಡೆದ ಕೊಂಡಿವೆ. 2024ರ ವಿಶ್ವಕಪ್‌ನಲ್ಲಿ ಅಗ್ರ 7 ಸ್ಥಾನಗಳನ್ನು ಪಡೆದ ಎಲ್ಲಾ 7 ತಂಡಗಳು ನೇರ ಅರ್ಹತೆ ಪಡೆದಿವೆ. ಜೊತೆಗೆ ಐಸಿಸಿ (ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್) ಟಿ-20 ರ್‍ಯಾಂಕಿಂಗ್‌ನಲ್ಲಿ ಉತ್ತಮ ಸ್ಥಾನ ಪಡೆದಿರುವ ಐರ್ಲೆಂಡ್, ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ಸಹ ನೇರ ಅರ್ಹತೆ ಪಡೆದುಕೊಂಡಿವೆ.

ಉಳಿದ 8 ಸ್ಥಾನಗಳಿಗಾಗಿ ನಡೆದ ಅರ್ಹತಾ ಸುತ್ತುಗಳಲ್ಲಿ ಅಮೇರಿಕಾದಿಂದ ಒಂದು ತಂಡ, ಆಫ್ರಿಕಾ ಮತ್ತು ಯೂರೋಪ್‌ನಿಂದ ತಲಾ ಎರಡು ತಂಡಗಳು. ಏಷ್ಯಾ ಮತ್ತು ಪ್ಯಾಸಿಫಿಕ್‌ನಿಂದ ಮೂರು ತಂಡಗಳು ಅರ್ಹತಾ ಸುತ್ತುಗಳ ಮೂಲಕ ಅಯ್ಕೆಯಾಗಿವೆ. ಸದ್ಯ, ಟಿ-20 ವಿಶ್ವಕಪ್ ಆಡಲಿರುವ 20 ತಂಡಗಳು ಯಾವುವು ಎಂಬುದು ಖಚಿತವಾಗಿವೆ.

ಇನ್ನೂ ಇತ್ತೀಚೆಗಿನ ಭಾರತದಲ್ಲಿ ತಮ್ಮ ಪಂದ್ಯಗಳನ್ನು ಆಡಲು ನಿರಾಕರಿಸಿದ ಬಾಂಗ್ಲಾದೇಶ ತಂಡದ ಬದಲು ಸ್ಕಾಟ್‌ಲ್ಯಾಂಡ್ ತಂಡಕ್ಕೆ ಟೂರ್ನಿಯಲ್ಲಿ ಅವಕಾಶ ನೀಡಲಾಗಿದೆ. ಆ ತಂಡ ಗ್ರೂಪ್ ಸಿ ಯಲ್ಲಿ ಅವಕಾಶ ಪಡೆದುಕೊಂಡಿದೆ.

**ಯಾವ ತಂಡ ಯಾವ ಗುಂಪಿನಲ್ಲಿದೆ**

ಗ್ರೂಪ್ ಎ: ಭಾರತ, ಅಮೇರಿಕ, ಪಾಕಿಸ್ತಾನ, ನೆದರ್‌ಲ್ಯಾಂಡ್, ನಮಿಬಿಯಾ

ಗ್ರೂಪ್ ಬಿ: ಆಸ್ಟ್ರೇಲಿಯಾ, ಐರ್ಲೆಂಡ್, ಶ್ರೀಲಂಕಾ, ಜಿಂಬಾಂಬ್ವೆ, ಓಮಾನ್

ಗ್ರೂಪ್ ಸಿ: ಇಂಗ್ಲೆಂಡ್, ವೆಸ್ಟ್ ಇಂಡೀಸ್, ಸ್ಕಾಟ್‌ಲ್ಯಾಂಡ್, ನೇಪಾಳ, ಇಟಲಿ

ಗ್ರೂಪ್ ಡಿ: ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಅಫ್ಘಾನಿಸ್ತಾನ, ಕೆನಡ, ಯುಎಇ

### ಟಿ-20 ವಿಶ್ವಕಪ್‌ನಿಂದ ಹರ್ಷಿತ್ ರಾಣಾ ಹೊರಕ್ಕೆ

ವಿಶ್ವಕಪ್ ಆರಂಭಕ್ಕೆ ಒಂದು ದಿನ ಮಾತ್ರ ಬಾಕಿ ಉಳಿದಿದ್ದು, ಭಾರತ ತಂಡದ ವೇಗಿ ಹರ್ಷಿತ್ ರಾಣಾ ಗಾಯಗೊಂಡು ಟೂರ್ನಿಯಿಂದಲೇ ಹೊರ ಬಿದ್ದಿದ್ದಾರೆ. ಈ ಹಿನ್ನಲೆ ಯಲ್ಲಿ ಅವರ ಬದಲಿಗೆ ಇನ್ನೋರ್ವ ವೇಗಿ ಮೊಹಮ್ಮದ್ ಸಿರಾಜ್ ಅವರಿಗೆ ಅವಕಾಶ ನೀಡಲಾಗಿದೆ. ಬುಧವಾರ ನಡೆದ ದಕ್ಷಿಣ ಆಫ್ರಿಕಾ ವಿರುದ್ಧದ ಅಭ್ಯಾಸ ಪಂದ್ಯದ ಸಂದರ್ಭದಲ್ಲಿ ಮೊಣ ಕಾಲಿನ ಗಾಯಕ್ಕೆ ಒಳಗಾಗಿ ತಂಡದಿಂದ ಹೊರಬಿದ್ದಿರುವ ಹರ್ಷಿತ್ ರಾಣಾ ಬದಲು ಮೊಹ ಮ್ಮದ್ ಸಿರಾಜ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ ಎಂದು ಬಿಸಿಸಿಐ ಮೂಲಗಳು ಮಾಹಿತಿ ನೀಡಿವೆ.

ಇದಕ್ಕೂ ಮೊದಲು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ನಾಯಕ ಸೂರ್ಯಕುಮಾರ್ ಯಾದವ್, ಹರ್ಷಿತ್ ರಾಣಾ ಅವರು ಸಂಪೂರ್ಣವಾಗಿ ಫಿಟ್ ಆಗಿಲ್ಲ. ಅವರು, ವೈದ್ಯರ ಮೇಲ್ವಿಚಾರಣೆಯಲ್ಲಿದ್ದಾರೆ. ಅವರನ್ನು ತಂಡದಿಂದ ಸಂಪೂರ್ಣವಾಗಿ ಹೊರಗಿಟ್ಟಿಲ್ಲ ಎಂದು ತಿಳಿಸಿದ್ದರು.

ಹರ್ಷಿತ್ ರಾಣಾಗೂ ಮೊದಲು, ಟಿ-20 ವಿಶ್ವಕಪ್‌ಗೆ ಆಯ್ಕೆ ಮಾಡಲಾಗಿದ್ದ ಭಾರತ ತಂಡದಿಂದ ಆಲ್‌ರೌಂಡರ್ ವಾಷಿಂಗ್‌ಟನ್ ಸುಂದರ್ ಗಾಯದಿಂದ ಹೊರಗುಳಿದಿದ್ದಾರೆ. ಕಳೆದ ಎರಡು ವರ್ಷಗಳಿಂದ ಅನೇಕ ವೇಗಿಗಳು ಭಾರತದ ಪರ ಅದ್ಭುತ ಪ್ರದರ್ಶನ ನೀಡಿದ್ದಾರೆ. ಹರ್ಷಿತ್ ಬದಲು ಬೌಲಿಂಗ್ ಜೊತೆಗೆ ಬ್ಯಾಟಿಂಗ್‌ನಲ್ಲೂ ಪ್ರದರ್ಶನ ತೋರಬಲ್ಲ ವೇಗಿ ಯಾರಾದರೂ ಇದ್ದಾರೆಂದು ಹುಡುಕುತ್ತೇವೆಂದು ಸೂರ್ಯಕುಮಾರ್ ತಿಳಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019